# ಸಂಪ್ರೀತಿ ಸಮೃದ್ಧಿ

ನಿಮ್ಮ ಮನ ಮನೆಗಳಿಗೆ...

ಮಾಸಿಕ


| Sampreethi - Samruddhi<br>ಸಂಪ್ರೀತಿ ಸಮೃದ್ಧಿ | Volume : 6<br>ಸಂಪುಟ : 6 | Issue : 11<br>ಸಂಚಿಕೆ : 11 | March 2024<br>ಮಾರ್ಚ್ 2024 | Pages : 32<br>ಪುಟಗಳು : 32 | ₹ 20/-<br>₹ 20 ರೂ. |
|---|---|---|---|---|---|




|| Jai Sri Gurudev ||



# SJ BGS POLYTECHNIC



(A Venture of Sri Adichunchanagiri Shikshana Trust ®)

(Approved by All India Council for Technical Education, New Delhi & Recognised by Government of Karnataka)

B G NAGAR, (BGSIT CAMPUS), NAGAMANGALA TALUK, MANDYA DISTRICT.

**COURSES OFFERED:**

- CIVIL ENGINEERING
- MECHANICAL ENGINEERING (General)
- COMPUTER SCIENCE & ENGINEERING
- ELECTRICAL & ELECTRONICS ENGINEERING
- ELECTRONICS & COMMUNICATION ENGINEERING

Eligibility:-
Pass in SSLC or Equivalent Examination with 35% aggregate.



**OUR VISION:**

To Impart Quality Education
Transformation of Child through Excellent Education
Child Centered Education

*Hunt Your Dreams*

**Institution Code : 541**



## Salient Features

- Highly Qualified and Experienced Faculty
- Spacious well equipped Class Rooms, Labs, Workshops and Seminar Halls
- Internet Facility
- Hostel Facility for Boys & Girls
- Sports Facility
- Transportation
- Canteen Facility
- Library



## For Admissions, Contact :

**PRINCIPAL**
**SJ BGS POLYTECHNIC,**

BGSIT CAMPUS, BG Nagar (Bellur Cross)
Nagamangala Taluk, Mandya District
Karmataka - 571 448

**E-mail :** ppl.sjbgsp@gmail.com
**Web :** www.sjbgsp.com
**Cell No. :** 9448207483

# ಸಂಪ್ರೀತಿ – ಸಮೃದ್ಧಿ

ನಿಮ್ಮ ಮನ ಮನೆಗಳಿಗೆ...

ಮಾಸಿಕ

ಸಂಪಾದಕೀಯ

ಮಾರ್ಚ್ : 2024

ಸಂಪುಟ 6, ಸಂಚಿಕೆ 11

ಸಂಪಾದಕರು

ಡಾ|| ಸಿ. ನಂಜುಂಡಯ್ಯ

ಚಂದಾ ವಿವರ :

| | |
|---|---|
| 10 ವರ್ಷಕ್ಕೆ | ರೂ.2000/– |
| 05 ವರ್ಷಕ್ಕೆ | ರೂ.1000/– |
| 02 ವರ್ಷಕ್ಕೆ | ರೂ.500/– |

ಹಣವನ್ನು ಮನಿಯಾರ್ಡರ್, ಬ್ಯಾಂಕ್ ಡ್ರಾಫ್ಟ್ ಮೂಲಕ ಕೆಳಗಿನ ವಿಳಾಸಕ್ಕೆ ಕಳುಹಿಸಬಹುದು.



ಸಂಪಾದಕರು

ಸಂಪ್ರೀತಿ – ಸಮೃದ್ಧಿ

ನಂ. 83, ಬಸವಣ್ಣ ದೇವಸ್ಥಾನ ರಸ್ತೆ
ದೊಡ್ಡಸೋಮನಹಳ್ಳಿ,
ಮಾಗಡಿ ತಾಲ್ಲೂಕು,
ರಾಮನಗರ ಜಿಲ್ಲೆ– 562 131.

#66, ಸಂಪ್ರೀತಿ – ಸದನ
ಸರ್ಕಾರಿ ಆಸ್ಪತ್ರೆ ಪಕ್ಕದ ರಸ್ತೆ,
ಮಾಗಡಿ – 562 120 ರಾಮನಗರ ಜಿಲ್ಲೆ.

ಮುದ್ರಕರು

- ಕಂಪ್ಯೂಟರ್ ವರ್ಲ್ಡ್
ಜಿ.ಟಿ.ವರ್ಲ್ಡ್ ಮಾಲ್ ಹತ್ತಿರ
ಮಲ್ಲಿಗೆ ತೋಟ, ಮಾಗಡಿ ರಸ್ತೆ,
ಬೆಂಗಳೂರು – 560 023.

- ಓದುಗರು ತಮ್ಮ ಅಭಿಪ್ರಾಯಗಳನ್ನು ಮತ್ತು ಲೇಖಕರು ಲೇಖನಗಳನ್ನು ಕೆಳಗಿನ ಈ–ಮೇಲ್ ವಿಳಾಸಕ್ಕೆ ಕಳುಹಿಸಬಹುದು.

sampreethisamruddhi@gmail.com

8971608213

ಸಂಪ್ರೀತಿ – ಸಮೃದ್ಧಿ


## ಈ ಕ್ರಮಗಳನ್ನು ಅನುಸರಿಸಿ, ಪರಿಕ್ಷೆ ಭಯದಿಂದ ದೂರವಿರಿ

ಮೊಟ್ಟಮೊದಲನೇಯದಾಗಿ ಪೋಷಕರೇ ನಿಮ್ಮ ಮಕ್ಕಳ ಪರೀಕ್ಷೆಗಳ ಬಗ್ಗೆ ಆತಂಕ ಪಡಬೇಡಿ.ನಿಮ್ಮ ಆತಂಕ ನಿಮ್ಮ ಮಕ್ಕಳಲ್ಲಿ ಪರೀಕ್ಷೆಯ ಬಗ್ಗೆ ಭಯ ಹುಟ್ಟಿಸಬಹುದು. ನಿಮ್ಮ ದೈನಂದಿನ ಜೀವನದಲ್ಲಿ ಮಕ್ಕಳಿಗೋಸ್ಕರ ಒಂದು ಗಂಟೆ ಸಮಯ ಮೀಸಲಿಡಿ. ಅವರ ಜೊತೆಯಲ್ಲಿ ಕುಳಿತು ಪರೀಕ್ಷೆಗೆ ಸಂಬಂಧಪಟ್ಟ ವಿಷಯಗಳ ಬಗ್ಗೆ ಚರ್ಚಿಸಿ, ಸಾಧ್ಯವಾದಲ್ಲಿ ಹೇಳಿಕೊಡಿ. ಹಾಗೆಯೇ ಪರೀಕ್ಷೆಯ ಬಳಿಕ ಅದರಲ್ಲಿ ಬಿಟ್ಟುಹೋದ ಪ್ರಶ್ನೆಗಳ ಬಗ್ಗೆ ಚರ್ಚಿಸಬೇಡಿ.

ದೈನಂದಿನ ಚಟುವಟಿಕೆಗಳಾದ ನಿದ್ದೆ, ಆಟ ಆಡುವುದು, ಟಿವಿ ನೋಡುವುದು, ಸ್ನೇಹಿತರೊಂದಿಗಿನ ಹರಟೆ ಯಾವುದೂ ಬೇಡ ಎನ್ನಬೇಡಿ. ಆವಾಗಲೇ ಪರೀಕ್ಷೆಯ ಬಗೆಗಿನ ಆತಂಕ ನಿವಾರಣೆಯಾಗುವುದು. ಆದರೆ ಸಾಧ್ಯವಾದಷ್ಟು ಪರೀಕ್ಷೆಗಳು ಮುಗಿಯುವವರೆಗೂ ಹೊರಗಿನ ತಿಂಡಿ ತಿನಿಸುಗಳಿಂದ ದೂರವಿರಿಸಿ. ಮಕ್ಕಳೇ. ಪರೀಕ್ಷೆಯಲ್ಲಿ ನಿಮ್ಮ ನೋಂದಣಿ ಸಂಖ್ಯೆಯನ್ನು ಸರಿಯಾಗಿ ಬರೆಯಿರಿ. ಪ್ರಶ್ನೆ ಸಂಖ್ಯೆಯೂ ಅಷ್ಟೇ. ಗೊತ್ತಿರದ ಪ್ರಶ್ನೆಗಳಿಗೆ ಉತ್ತರ ಯೋಚಿಸುತ್ತ ಸಮಯ ವ್ಯರ್ಥಗೊಳಿಸಬೇಡಿ. ಗೊತ್ತಿರುವ ಪ್ರಶ್ನೆಗಳಿಗೆ ಸರಿಯಾಗಿ ಸಂಖ್ಯೆ ಹಾಕಿ ಉತ್ತರ ಬರೆದುಬಿಡಿ.

ಪರೀಕ್ಷಾ ಸಮಯಕ್ಕಿಂತ ಕನಿಷ್ಠ 15 ನಿಮಿಷ ಮುಂಚೆನೇ ನಿಮಗಾಗಿಯೇ ಕಾಯ್ದಿರಿಸಿದ ಸ್ಥಳದಲ್ಲಿ ಹಾಜರಿರಿ. ಉತ್ತರ ಪತ್ರಿಕೆ ಕೈಗೆ ಬರುವವರೆಗೂ ಓದಬೇಡಿ. ಅದರಿಂದ confusion ಹೆಚ್ಚುತ್ತದೆ ಹೊರತು ಏನು ಲಾಭವಿಲ್ಲ. ಒಂದೊಮ್ಮೆ ಪರೀಕ್ಷಾ ಕೊಠಡಿಗೆ ಬಂದರೆ ಉತ್ತರ ಪತ್ರಿಕೆ ಕೊಡುವವರೆಗೂ ಕಣ್ಣು ಮುಚ್ಚಿ ರಿಲ್ಯಾಕ್ಸ್ ಆಗಿ. ಪರೀಕ್ಷೆ ಶುರುವಾಗುವ ಮೊದಲಿನ ಈ 10 ನಿಮಿಷಗಳು ತುಂಬಾ ಮುಖ್ಯ.

ಪರೀಕ್ಷೆಗೆ ಬೇಕಾಗುವ ಸಲಕರಣೆಗಳನ್ನು ಹೊರತುಪಡಿಸಿ ನಿಮ್ಮ ಬಳಿ ಇನ್ನೇನನ್ನೂ ಇಟ್ಟುಕೊಳ್ಳಬೇಡಿ. ನಿಮ್ಮ ಅನುಮಾನಗಳೇನೇ ಇದ್ದರೂ invigilator ನ ಕೇಳಿ. ಸಹಪಾಠಿಗಳೊಂದಿಗೆ ಅನವಶ್ಯಕವಾಗಿ ಮಾತನಾಡದಿರಿ. ಇದರಿಂದ ಸಮಯವೂ ವ್ಯರ್ಥ ಜೊತೆಗೆ Bad remark ಬರುವ ಸಾಧ್ಯತೆಗಳೂ ಉಂಟು.

ಕೊನೆಯದಾಗಿ ಒಂದು ಒಳ್ಳೆಯ ಸಲಹೆ ಆತಂಕದಿಂದ ಯಾವುದನ್ನೂ ಗೆದ್ದ ಉದಾಹರಣೆಗಳಿಲ್ಲ ಆದರೆ ಆತ್ಮವಿಶ್ವಾಸದಿಂದ ಜಗತ್ತನ್ನೇ ಗೆಲ್ಲಬಹುದು. ಎಲ್ಲ ಪರೀಕ್ಷೆಗಳಿಗಿಂತ ಜೀವನ ಮುಖ್ಯ. ಕಡಿಮೆ ಅಂಕ ಗಳಿಸಿದವರಿಗೆ ಭವಿಷ್ಯವೇ ಇಲ್ಲ ಎಂಬ ಭ್ರಮೆ ಬೇಡ. ಮಕ್ಕಳಿಗೆ ಇಷ್ಟೇ ಅಂಕ ಪಡೆಯಬೇಕು, ಮೊದಲನೇ ಶ್ರೇಣಿಯಲ್ಲೇ ಉತ್ತೀರ್ಣರಾಗಬೇಕೆಂಬ ಒತ್ತಡ ಹೇರದಿರಿ. ಪರೀಕ್ಷೆಯಲ್ಲಿ ಗಳಿಸುವ ಅಂಕಗಳು ಮನುಷ್ಯನ ಬುದ್ಧಿವಂತಿಕೆಯನ್ನಳೆಯುವ ಅಳತೆಗೋಲಲ್ಲ ಎಂಬ ಪುಟ್ಟ ಸತ್ಯವನ್ನು ಸದಾ ನೆನಪಿನಲ್ಲಿಡಿ.



# ವಿಶ್ವ ನಾಗರಿಕ ಪಡೆ ದಿನ

ಪ್ರತಿ ವರ್ಷ ಮಾರ್ಚ್ 1 ರಂದು, ಜಗತ್ತಿನಾದ್ಯಂತ ಜನರು ಜಾಗತಿಕ ಸಿವಿಲ್ ಡಿಫೆನ್ಸ್ ದಿನಾಚರಣೆ ಅಥವಾ ವಿಶ್ವ ನಾಗರಿಕ ಪಡೆ ದಿನವನ್ನು (World Civil Defence Day) ಆಚರಿಸಲಾಗುತ್ತದೆ. ಈ ದಿನವನ್ನು 1990 ರಲ್ಲಿ ಇಂಟರ್‌ನ್ಯಾಷನಲ್ ಸಿವಿಲ್ ಡಿಫೆನ್ಸ್ ಆರ್ಗನೈಸೇಶನ್ (ICDO) ಜಾಗತಿಕ ರಜಾದಿನವೆಂದು ಘೋಷಣೆ ಮಾಡಿತ್ತು, ಈ ದಿನವು ನಾಗರಿಕ ರಕ್ಷಣೆಯ ಮಹತ್ವ ಹಾಗೂ ಅದಕ್ಕಾಗಿ ತಮ್ಮ ಪ್ರಾಣವನ್ನು ತ್ಯಾಗ ಮಾಡಿದ ಸಿಬ್ಬಂದಿಯನ್ನು ಗೌರವಿಸುತ್ತದೆ. ICDO ಎಂಬುದು ಅಂತರ್ ಸರ್ಕಾರಿ ಸಂಸ್ಥೆಯಾಗಿದ್ದು ಅದು ನಾಗರಿಕರು (Civilians) ಅಭಿವೃದ್ಧಿ ಹೊಂದಲು ಮತ್ತು ಸುರಕ್ಷಿತವಾಗಿರಲು ಸಹಾಯ ಮಾಡುತ್ತದೆ.

ICDO ನಾಗರಿಕ ರಕ್ಷಣೆ ಮತ್ತು ನಾಗರಿಕ ಸುರಕ್ಷತೆಗಾಗಿಯೇ ಮೀಸಲಾಗಿದೆ. ಅಂತರಾಷ್ಟ್ರೀಯ ನಾಗರಿಕ ರಕ್ಷಣಾ ಸಂಸ್ಥೆಯು 58 ಸದಸ್ಯ ರಾಷ್ಟ್ರಗಳು ಮತ್ತು 17 ವೀಕ್ಷಕ ದೇಶಗಳನ್ನು ಹೊಂದಿದೆ. ಅದರ ಸದಸ್ಯ ರಾಷ್ಟ್ರಗಳ ನಾಗರಿಕ ರಕ್ಷಣಾ ಪಡೆ ಸಿಬ್ಬಂದಿಯ ಮಾನವ ಸಂಪನ್ಮೂಲಗಳನ್ನು ಸುಧಾರಿಸಲು ಸಾಧ್ಯವಾದಷ್ಟು ತರಬೇತಿ ಕಾರ್ಯಕ್ರಮಗಳನ್ನು ನಡೆಸುತ್ತದೆ.

## ವಿಶ್ವ ಸಿವಿಲ್ ಡಿಫೆನ್ಸ್ ದಿನದ ಇತಿಹಾಸ

ವಿಶ್ವ ಸಿವಿಲ್ ಡಿಫೆನ್ಸ್ ದಿನವನ್ನು ಅಂತರಾಷ್ಟ್ರೀಯ ನಾಗರಿಕ ರಕ್ಷಣಾ ಸಂಸ್ಥೆ ಪ್ರಾರಂಭಿಸಿದೆ. ಇಂಟರ್ನ್ಯಾಷನಲ್ ಸಿವಿಲ್ ಡಿಫೆನ್ಸ್ ಆರ್ಗನೈಸೇಶನ್, ಅಥವಾ ICDO, 1931 ರಲ್ಲಿ ಸರ್ಜನ್–ಜನರಲ್ ಜಾರ್ಜ್ ಸೇಂಟ್–ಪಾಲ್ ಅವರು ಜಿನೀವಾ ವಲಯಗಳ ಸಂಘವನ್ನು ಸ್ಥಾಪಿಸಿದರು. ಅದು ನಂತರ ICDO ಆಯಿತು. ಸಾಮಾನ್ಯ ಜನರ ಮೇಲೆ ಯುದ್ಧದ ಪರಿಣಾಮಗಳನ್ನು ವೀಕ್ಷಿಸಿದ ನಂತರ ಸೇಂಟ್–ಪಾಲ್ ಸುರಕ್ಷಿತ ವಲಯಗಳನ್ನು ನಿರ್ಮಿಸಲು ಉದ್ದೇಶಿಸಿದ್ದರು. ಆ ಸುರಕ್ಷಿತ ವಲಯಗಳಲ್ಲಿ ನಿವಾಸಿಗಳು ಯುದ್ಧದ ಸಮಯದಲ್ಲಿ ಅಲ್ಲಿ ಆಶ್ರಯ ಪಡೆಯಬಹುದಿತ್ತು.

ಸಿವಿಲ್ ಡಿಫೆನ್ಸ್ ಅನ್ನು ನಾಗರಿಕ ರಕ್ಷಣೆ ಎಂದೂ ಕರೆಯುತ್ತಾರೆ. ಇದು ನೈಸರ್ಗಿಕ ವಿಕೋಪಗಳಿಂದ ತಮ್ಮನ್ನು ಹೇಗೆ ರಕ್ಷಿಸಿಕೊಳ್ಳಬೇಕೆಂದು ನಾಗರಿಕರಿಗೆ ಕಲಿಸುವ ಅಭ್ಯಾಸವಾಗಿದೆ. ಅಲ್ಲದೆ, ಈ ವಿಕೋಪಗಳನ್ನು ಹೇಗೆ ತಡೆಗಟ್ಟುವುದು, ವಿಕೋಪಗಳು ಬಂದ ನಂತರ ಅದಕ್ಕೆ ಹೇಗೆ ತಯಾರಿ ಮಾಡುವುದು, ಪ್ರತಿಕ್ರಿಯಿಸುವುದು, ಜನರನ್ನು ಸ್ಥಳಾಂತರ ಮಾಡುವುದು, ಹೇಗೆ ಚೇತರಿಸಿಕೊಳ್ಳುವುದು ಎಂಬುದನ್ನು ಕಲಿಸಲಾಗುತ್ತದೆ. ಅದು ಇಂದು ಅಂತಾರಾಷ್ಟ್ರೀಯ ಸಿವಿಲ್ ಡಿಫೆನ್ಸ್ ಸಂಸ್ಥೆ (ICDO) ಯಾಗಿ ಅಸ್ತಿತ್ವದಲ್ಲಿದೆ.

ICDO ದ ಪ್ರಸ್ತುತ ಸಂವಿಧಾನವನ್ನು 1972 ರಲ್ಲಿ ಸಂಸ್ಥೆಯ ಸದಸ್ಯ–ರಾಜ್ಯಗಳು ಅನುಮೋದಿಸಿದವು. ಇದು ಅದೇ ವರ್ಷದ ಮಾರ್ಚ್ 1 ರಂದು ಜಾರಿಗೆ ಬಂದಿತು. ಈ ಹಿನ್ನೆಲೆ ಈಗ ಮಾರ್ಚ್ 1 ರಂದು ವಿಶ್ವ ಸಿವಿಲ್ ಡಿಫೆನ್ಸ್ ದಿನಾಚರಣೆಯಾಗಿ ಆಚರಿಸಲಾಗುತ್ತದೆ.

## ವಿಶ್ವ ಸಿವಿಲ್ ಡಿಫೆನ್ಸ್ ದಿನದ ಮಹತ್ವ

ರಾಷ್ಟ್ರೀಯ ವಿಪತ್ತು-ತಡೆಗಟ್ಟುವಿಕೆ ಸೇವೆಗಳ ಸಾಧನೆಗಳನ್ನು ಗೌರವಿಸುವುದು ಈ ದಿನದ ಉದ್ದೇಶವಾಗಿದೆ. ಇದು ಅಪಘಾತಗಳು ಅಥವಾ ವಿಪತ್ತುಗಳ ಸಂದರ್ಭದಲ್ಲಿ ಆತ್ಮರಕ್ಷಣೆ ಮತ್ತು ತಡೆಗಟ್ಟುವಿಕೆಯ ಮಹತ್ವದ ಬಗ್ಗೆ ಜಾಗೃತಿ ಮೂಡಿಸುತ್ತದೆ. ಮೆಚ್ಚುಗೆ ಪಡೆಯದ ವೀರರ ಕೊಡುಗೆಗಳು ಮತ್ತು ಪ್ರಯತ್ನಗಳನ್ನು ವಿಶ್ವ ಸಿವಿಲ್ ಡಿಫೆನ್ಸ್ ದಿನದಂದು ಗೌರವಿಸಲಾಗುತ್ತದೆ.

ಕೆಲವು ವ್ಯಕ್ತಿಗಳು ಇನ್ನೂ ನಾಗರಿಕ ರಕ್ಷಣಾ ಚಟುವಟಿಕೆಗಳನ್ನು ಸಂಭಾವ್ಯ ದುರಂತದ ಘಟನೆಗಳ ಉತ್ಪ್ರೇಕ್ಷೆ ಎಂದು ಪರಿಗಣಿಸುತ್ತಾರೆ. ಇದು ಅವರ ಕೆಲಸವನ್ನು ಹೆಚ್ಚು ಕಷ್ಟಕರವಾಗಿಸುತ್ತದೆ. ಈ ಹಿನ್ನೆಲೆ ತುರ್ತು ಸಮಯದಲ್ಲಿ ಜೀವಗಳನ್ನು ಉಳಿಸಲು ಮಿಲಿಟರಿ ಅಥವಾ ವೈದ್ಯಕೀಯ ಲೈನ್‌ನಿಂದ ಅಗತ್ಯವಿಲ್ಲ ಎಂದು ಪುನರುಚ್ಚರಿಸುತ್ತದೆ ಹಾಗೆಯೇ ಯಾರಾದರೂ ನಾಗರಿಕ ರಕ್ಷಣಾ ಸಂಸ್ಥೆಗೆ ಸೇರಬಹುದು ಹಾಗೂ ತುರ್ತು ಅಥವಾ ದುರಂತದ ಸಮಯದಲ್ಲಿ ಸೇವೆ ಸಲ್ಲಿಸಬಹುದು.

ನೈಸರ್ಗಿಕ ವಿಕೋಪಗಳನ್ನು ತಡೆಯುವ ಶಕ್ತಿಗಿಂತ ಹೆಚ್ಚಾಗಿ, ಆ ಪರಿಸ್ಥಿತಿಯಿಂದ ಹೊರಬರಲು ಕ್ರಮಗಳು ಬೇಕಾಗುತ್ತವೆ. ಇದೇ ವಿಶ್ವ ಸಿವಿಲ್ ಡಿಫೆನ್ಸ್ ದಿನಾಚರಣೆಯ ಉದ್ದೇಶವಾಗಿದೆ. ಇಂದು, ಜೀವನದಲ್ಲಿ ಸುರಕ್ಷಿತವಾಗಿ ಮುಂದುವರಿಯಲು ನಾವೆಲ್ಲರೂ ಸುರಕ್ಷತಾ ಮುನ್ನೆಚ್ಚರಿಕೆಗಳು ಮತ್ತು ಆತ್ಮರಕ್ಷಣೆಯ ಸಾಮರ್ಥ್ಯಗಳ ಬಗ್ಗೆ ತಿಳಿದಿರಬೇಕು. ಇದರ ಪರಿಣಾಮವಾಗಿ, ನಾನು ನಿಮಗೆ ಉತ್ತಮ ಮಾಹಿತಿಯುಳ್ಳ ವಿಶ್ವ ಸಿವಿಲ್ ಡಿಫೆನ್ಸ್ ದಿನವನ್ನಾಗಿಸಲು ಬಯಸೋಣ.

ॐ

# "ವಿಪರ್ಯಾಸ...... ಆದರೂ ಕಹಿಸತ್ಯ"



ಒಂದು ಹೋಟೆಲ್ ಮುಂದೆ ಇಲ್ಲಿ ಎಲ್ಲವೂ ಉಚಿತ, ಆದರೆ... ಸ್ವಲ್ಪ ವಾಂತಿ, ಭೇದಿ ಆಗಬಹುದು ಎಂದು ಬರೆದಿತ್ತು, ಆದ್ದರಿಂದ ಯಾರೂ ತಿನ್ನುವುದಕ್ಕೆ ಅಲ್ಲಿಗೆ ಬರಲಿಲ್ಲ.

ಒಂದು ಬಸ್ಸಿನ ಮುಂದೆ ಇಲ್ಲಿ ಎಲ್ಲಿಗಾದರೂ ಪ್ರಯಾಣವು ಉಚಿತ, ಎಲ್ಲಿಗೆ ಬೇಕಾದರೂ ಹೋಗಬಹುದು, ಆದರೆ... ಆಗಾಗ್ಗೆ ಬ್ರೇಕ್ ಫೇಲ್ಯೂರ್ ಆಗ್ತಾಯಿರುತ್ತೆ ಅಷ್ಟೇ ಎಂದು ಬರೆದಿತ್ತು. ಆದ್ದರಿಂದ ಯಾರೂ ಸಹ ಪ್ರಯಾಣಿಕರು ಆ ಬಸ್ ಏರಲಿಲ್ಲ.

ಒಂದು ಮೆಡಿಕಲ್ ಷಾಪಿನ ಮುಂದೆ ಇಲ್ಲಿ ಎಲ್ಲಾ ರೋಗಗಳಿಗೂ ಉಚಿತ ಚಿಕಿತ್ಸೆ ಇರುತ್ತೆ, ಆದರೆ... ನಿಮ್ಮ ಪ್ರಾಣಕ್ಕೆ ನಾವು ಜವಾಬ್ದಾರಿಯಲ್ಲ ಎಂದು ಬರೆದಿತ್ತು. ಆದ್ದರಿಂದ ಕಡು ಬಡವನು ಸಹ ಚಿಕಿತ್ಸೆಗೆ ಬರುತ್ತಿರಲಿಲ್ಲ.

ಆದರೆ... "ಸಾರಾಯಿಯ ಸಹವಾಸ-ಹೆಂಡತಿ ಮಕ್ಕಳ ಉಪವಾಸ" "ಕುಡಿತದಿಂದ ಪ್ರಾಣಕ್ಕೆ ಹಾನಿಕರ.." ಎಂದೆಲ್ಲಾ ಬರೆದಿದ್ದರೂ ಸಹ ಇಡೀ ದೇಶದಲ್ಲಿ ಒಂದು ದಿನಕ್ಕೆ 800 ಕೋಟಿಗೂ ಮೀರಿದಂತೆ ಸಾರಾಯಿಯ ವ್ಯಾಪಾರ ವಹಿವಾಟು ಆಗುವುದಂತೆ..! ॐ



# ಶಿವರಾತ್ರಿ ತನ್ನಿಮಿತ್ತ ಸಕಾಲಿಕ ಲೇಖನ

✍ ಡಾ. ಗುರುರಾಜ ಪೋಶೆಟ್ಟಿಹಳ್ಳಿ (ಪ್ರಣವ)
ಸಂಸ್ಕೃತಿ ಚಿಂತಕರು:

**ಸತ್ಯ – ಶಿವಂ – ಸುಂದರಂ**


ಹಿಂದೂ ಸಂಸ್ಕೃತಿಯಲ್ಲಿ ಪ್ರತಿದಿನವೂ ಹಬ್ಬ, ಪ್ರತಿಯೊಂದು ಕ್ಷಣವೂ ಪರ್ವಕಾಲವೇ. ನಿತ್ಯೋತ್ಸವವೇ ಹಿಂದೂ ಸಂಸ್ಕೃತಿಯ ವಿಶೇಷ. ಈ ನಿತ್ಯೋತ್ಸವ ಜೊತೆಗೆ ಕೆಲವು ವಿಶೇಷ ಮಹೋತ್ಸವಗಳೂ ಸೇರಿಕೊಂಡು ಇನ್ನೂ ಹೆಚ್ಚು ಮೆರಗು, ಘನತೆ, ಪರ್ವಕಾಲದ ಸಾಲಿನಲ್ಲಿ ಮಹಾಶಿವರಾತ್ರಿಗೆ ಅಗ್ರಸ್ಥಾನ.

ಅಂದು ರಾತ್ರಿಯೆಲ್ಲಾ ಲಿಂಗರೂಪಿಯಾದ ಪರಮೇಶ್ವರನನ್ನು ಸ್ಮರಿಸುತ್ತಾ ಆರಾಧಿಸುವ ಪರಮಪುಣ್ಯ ಸಮಯ. ಗಂಗಾಭಿಷೇಕ, ಬಿಲ್ವ ಭಸ್ಮಗಳಿಂದ ಅರ್ಚಿಸುತ್ತಾ, ಪಂಚಾಕ್ಷರಿ ಮಂತ್ರ ಜಪಿಸುತ್ತಾ ಪರಶಿವನನ್ನು ಸಂತೋಷಗೊಳಿಸಿ ಅವನ ಅನುಗ್ರಹ ಪಡೆಯುವ ಸುವರ್ಣ ಸಂಧಿಕಾಲವೇ ಮಾಘಕಷ್ಣ ಚತುರ್ದಶಿಯ ಮಹಾಶಿವರಾತ್ರಿ.

ಪರಮೇಶ್ವರನ ಉಪಾಸನೆಗೆ ಕೃಷ್ಣಪಕ್ಷದ ಚತುರ್ದಶಿ ಪ್ರಶಸ್ತ ತಿಥಿ. ಅಮಾವಾಸ್ಯೆಯ ಹಿಂದಿನ ದಿನ. ಈ ದಿನವು ಕತ್ತಲೆಯ ಪರಮಾವಧಿಯಾಗಿದ್ದು ಎರಡು ಮಾಸಗಳ, ಎರಡು ಪಕ್ಷಗಳ, ಎರಡು ತಿಥಿಗಳ, ಎರಡು ದಿನಗಳ ಸಂಧಿಕಾಲ. ಅಂದು ಸಚ್ಚಿದಾನಂದ ಮಂಗಳ ಸ್ವರೂಪಿಯಾದ ಸ್ವಾತ್ಮಾರಾಮನಾದ, ಪರಶಿವನನ್ನು ಪೂಜಿಸುವುದರಿಂದ ಶುಭರಾತ್ರಿ ಮಂಗಳ ಪವಿತ್ರ ರಾತ್ರಿಯಾಗುತ್ತದೆ!

## ಲಿಂಗಾವತಾರದ ಶಿವರಾತ್ರಿ

ಶಿವನ ಕುರಿತು ಹಿಂದೂ ಸಮಾಜದಲ್ಲಿ 'ಶಿವರಾತ್ರಿ' ವ್ರತಾಚರಣೆ ಮಹತ್ವದ ಪರ್ವ. ಶಿವರಾತ್ರಿಗೂ ಈ ಶಿವನಿಗೂ ಏನು ಸಂಬಂಧ? ರಾಮ ಹುಟ್ಟಿದ ದಿನ, ಕೃಷ್ಣಾಷ್ಟಮಿ, ಹಾಗೆಯೇ ಶಿವ ಹುಟ್ಟಿದ ದಿನ ಈ ಚತುರ್ದಶಿಯೇ? ಅಲ್ಲ. ರಾಮ–ಕೃಷ್ಣರಂತೆ ಶಿವನೊಂದು ಅವತಾರವಲ್ಲ. ದೇವತೆಗಳ ಮೂಲರೂಪಕ್ಕೆ ಹುಟ್ಟು ಹಬ್ಬವನ್ನು ಆಚರಿಸುವುದು ರೂಢಿಯಲ್ಲಿಲ್ಲ. (ಗಣಪತಿ ಮತ್ತು ಷಣ್ಮುಖರನ್ನು ಬಿಟ್ಟು) ಹಾಗಾದರೆ ಏನು ಈ ಶಿವರಾತ್ರಿಯೆಂದರೆ? ಲಿಂಗವಾದುದು ಹೇಗೆ? ಇದರ ಬಗ್ಗೆ ಪುರಾಣಗಳು ಒಂದು ಸ್ವಾರಸ್ಯವಾದ ಕಥೆಯನ್ನು ಹೇಳುತ್ತವೆ.



ಹಿಮಾಲಯದಲ್ಲಿ ಶಿವ ತಪಸ್ಸಿಗೆ ಕೂತ. ಅವನ ತಪೋಭಂಗ ಮಾಡಲು ಕಾಮದೇವ ಹೂ ಬಾಣಗಳನ್ನು ಹೊತ್ತುತಂದ. ಕಾಮ ದೇವನಿಂದ ತಪ್ಪಿಸಿಕೊಳ್ಳುವ ಸಲುವಾಗಿ ಶಿವ ಸಪ್ತರ್ಷಿಗಳ ಆಶ್ರಮದ ಬಳಿ ಸುತ್ತಾಡಿದನಂತೆ. ತಮ್ಮ ಆಶ್ರಮಕ್ಕೆ ಆಯಾಚಿತನಾಗಿ ಬಂದ ಶಿವನನ್ನು ಕಂಡ ಸಪ್ತರ್ಷಿಗಳು ತಲೆಬಾಗಿ ಸ್ವಾಗತಿಸಿದರು. ಋಷಿಪತ್ನಿಯರು ಶಿವನನ್ನು ಕಾಣಲೆಂದು ಒಳಮನೆಯಿಂದ ಹೆಬ್ಬಾಗಿಲಿಗೆ ಬಂದರು. ಇಲ್ಲಿಂದ ಕಥೆಗೆ ಹೊಸ ತಿರುವು ಬಂತು.

ಶಿವನನ್ನು ಬೆನ್ನಟ್ಟಿ ಬಂದ ಕಾಮದೇವನೂ ಪ್ರಾಯಃ ಸಪ್ತರ್ಷಿಗಳ ಆಶ್ರಮಕ್ಕೆ ಬಂದಿರಬೇಕು. ಆದರೆ ಇಲ್ಲಿ ಅವನ ಬಾಣ ಗುರಿತಪ್ಪಿತೋ, ಇಲ್ಲ ಬೇಕೆಂದೇ ಕಿಡಿಗೇಡಿತನ ಮಾಡಿದನೋ ಗೊತ್ತಿಲ್ಲ. ಅಂತೂ ಹೂಬಾಣ ಶಿವನನ್ನು ಕಂಗೆಡಿಸುವ ಬದಲು ಋಷಿ ಪತ್ನಿಯರನ್ನು ಕಂಗೆಡಿಸಿತು. ಕಾಮನೆಯನ್ನು ಗೆದ್ದು, ದಾಡಿ ಬಿಟ್ಟು ತಪಸ್ಸಿಗೆ ಕೂತು, ವೇದಾಭ್ಯಾಸ ಜಡರಾದ ಋಷಿಗಳ ಕೈಹಿಡಿದು ಸಂಸಾರ ನಡೆಸುತ್ತಿದ್ದ ಈ ಹೆಣ್ಮಕ್ಕಳು ವಿಶ್ವ ಮೋಹಕನಾದ ಹರನ ಹರೆಯದ ರೂಪವನ್ನು ಕಂಡು ದಂಗಾದರು. ಸುಪ್ತವಾದ ಬಯಕೆ ಪುಟಿದೆದ್ದು ಕಣ್ಣರಳಿ ನಿಂತರೂ, ಮೋಡಿಗೆ ಮರುಳಾದವರಂತೆ ಶಿವನ ಜೊತೆಗೆ ನಡೆಯತೊಡಗಿದರು. ಇದಕ್ಕೆ ಅಪವಾದವಾಗಿ ನಿಂತವರು ವಸಿಷ್ಠನ ಹೆಂಡತಿ ಅರುಂಧತಿ ಮತ್ತು ಅತ್ರಿಯ ಹೆಂಡತಿ ಅನುಸೂಯೆ ಮಾತ್ರ.

ಮರೀಚಿ, ಆಂಗೀರಸ, ಪುಲಸ್ತ್ಯ ಪುಲಹ, ಕೃತು–ಇವರ ಪತ್ನಿಯರು ಮತ್ತು ಇತರ ಋಷಿಕೆಯರು ಮಾತ್ರ ತಮ್ಮ ಬಯಕೆಯನ್ನು ನಿಯಂತ್ರಿಸಲಾರದಾದರು. ಕಾಮದೇವ ಅಲ್ಲಿ ಸೋತವ ಇಲ್ಲಿ ಗೆದ್ದ.

ಪರಿಸ್ಥಿತಿಯ ಬೆಳವಣಿಗೆಯನ್ನು ಕಂಡು ಋಷಿಗಳು ಕೋಪಗೊಂಡರು. ಕೃಷ್ಣನ ಬೆನ್ನು ಹತ್ತಿದ ಗೋಪಿಯರಂತೆ ಶಿವನ ಬೆನ್ನು ಹತ್ತಿದ ತಮ್ಮ ಆಶ್ರಮದ ಹೆಂಗೆಳೆಯರನ್ನು ಕಂಡು ಮರುಕಗೊಂಡರು. ಪರಿಣಾಮವಾಗಿ ಅವರು ಶಿವನಿಗೆ ಹೀಗೆ ಶಾಪ ಕೊಟ್ಟರಂತೆ – 'ಅಮಾಯಕರಾದ ಹೆಣ್ಮಕ್ಕಳ ಎದೆಯಲ್ಲಿ ಬೆದೆಯ ಬೀಜವನ್ನು ಬಿತ್ತಿದ ಶಿವನಿಗೆ ಇನ್ನು ಮುಂದೆ 'ಲಿಂಗ'ದ ರೂಪದಲ್ಲಿಯೇ ಪೂಜೆ ಸಲ್ಲಲಿ'.

ಋಷಿಗಳ ಶಾಪಕ್ಕೆ ಎಡೆಯಾದ ಶಿವ ಮಾಘ ಕಷ್ಣ ಚತುರ್ದಶಿಯಂದು ಲಿಂಗ ರೂಪದಿಂದ ಭೂಮಿಯಲ್ಲಿ ಪ್ರಾದುರ್ಭವಿಸಿದನಂತೆ. ಹೀಗೆ ಶಿವನ ಲಿಂಗಾವತಾರದ ದಿನವೇ 'ಶಿವರಾತ್ರಿ' ಆಯಿತಂತೆ!

ಕೊನೆಗೂ ಕಾಮದೇವ ಗೆದ್ದ. ಅಂದಿನಿಂದ ಶಿವನಿಗೆ ಮೂರ್ತಿ ಪೂಜೆ ಇಲ್ಲವಾಯಿತು. ಬದಲಾಗಿ ಲಿಂಗಪೂಜೆ ಪ್ರಾರಂಭವಾಯಿತು. ಶಿವಭಕ್ತರೆಲ್ಲರೂ ಶಿವನ ಬದಲು ಶಿವಲಿಂಗವನ್ನು ಪೂಜಿಸತೊಡಗಿದರು ಎಂಬುದು ಒಂದು ಪ್ರತೀತಿ.(?)

ಚರಾಚರ ಜಗತ್ತಿನ ಉತ್ಪತ್ತಿಗೆ ಕಾರಣೀಭೂತವಾದ ಆದಿಪುರುಷನ ಸ್ವರೂಪ ಬೋಧಕವೇ ಈ ಲಿಂಗಾಕಾರದ ಸಂಕೇತ. ಲಿಂಗದ ಪಾಣಿಪೀಠವು ಪ್ರಕೃತಿ ಸ್ವರೂಪಿಣಿಯಾದ ಪಾರ್ವತಿಯ ಪ್ರತೀಕವಾದರೆ, ಲಿಂಗಾಕಾರವು ಚಿನ್ಮಯ ರೂಪಿಯಾದ ಪರಬ್ರಹ್ಮ ಪುರುಷಸ್ವರೂಪ. ಪೀಠವು ಅಂಬಾಮಯ ಹಾಗೂ ಶಿವಲಿಂಗ ಚಿನ್ಮಯ ಪುರುಷಮಯವಾಗಿದೆ.

'ಲಿಂಗ' ಪದಕ್ಕೆ 'ಅಕೃತಿರ್ಜಾತಿಲಿಂಗಾಖ್ಯಾ' ಎಂಬ ಆಧಾರದಿಂದ ಪರಶಿವನ ಪರಿಚಾರ್ಯಕವೆಂದು ಅರ್ಥಮಾಡಿದ್ದಾರೆ. ಶಿವ ಪುರಾಣದಲ್ಲಿ ಶಿವಲಿಂಗವನ್ನು ಜ್ಯೋತಿ ಸ್ತಂಭರೂಪವಾದ 'ಓಂ' ಕಾರವೆಂದು ಬಣ್ಣಿಸಲಾಗಿದೆ. ಸೂಕ್ಷ್ಮ ಲಿಂಗವು ಪ್ರಣವ ಸ್ವರೂಪಿ ಹಾಗೂ ನಿಷ್ಕಲ. ಸ್ಥೂಲ ಲಿಂಗವು ಸಂಪೂರ್ಣ ಬ್ರಹ್ಮಾಂಡ, ಚರಾ ಚರಾತ್ಮಕವಾದ ಸಂಪೂರ್ಣ ಜಗತ್ತು. ಬ್ರಹ್ಮಾಂಡರೂಪ ಶಿವಲಿಂಗಾಧಿಷ್ಠವಾದುದರಿಂದ ಶಿವಲಿಂಗವೊಂದನ್ನು ಪೂಜಿಸಿದರೆ ಸೂರ್ಯ, ಚಂದ್ರ, ಮೊದಲಾದ ಸಮಸ್ತ ದೇವತೆಗಳ ಪೂಜೆ ಸಂದಂತಾಗುವುದು. ಶ್ರೀಮನ್ನಾರಾಯಣನ ಅವ್ಯಕ್ತವು ಸಾಲಿಗ್ರಾಮವಾದಂತೆ ಶಿವನ ಅವ್ಯಕ್ತರೂಪವು ಲಿಂಗವಾಗಿದೆ.

## ದಕ್ಷಿಣಾಮೂರ್ತಿ

ಪರಮೇಶ್ವರನ ಲೀಲಾ ವಿಭೂತಿಗಳಲ್ಲಿ ದಕ್ಷಿಣಾಮೂರ್ತಿಯೂ ಒಂದು. ವೀಣಾ, ಸಾಂಬ, ಯೋಗ, ಸಂಹಾರ, ಶಕ್ತಿ, ಜ್ಞಾನ, ಅನುಷ್ಠಾನ, ವ್ಯಾಖ್ಯಾನ, ವಿದ್ಯಾ, ವಟಮೂಲ ಎಂಬ ಹತ್ತು ವಿಧ ಶಿವಮೂರ್ತಿಗಳಲ್ಲಿ ಕೊನೆಯದೇ ಇದು. ದಕ್ಷಿಣಾ ಎಂದರೆ ಬುದ್ಧಿ. ಆ ಬುದ್ಧಿಯ (ಜ್ಞಾನದ) ಕಡೆಗೆ ಅಭಿಮುಖನಾಗಿರುವುದರಿಂದ ಈ ಹೆಸರು. ಮೂರ್ತಿ ದಕ್ಷಿಣಾಭಿಮುಖವಾಗಿ ಇರುವುದರಿಂದ ಈ ಹೆಸರು ಎಂದು ಕೆಲವರ ಅಭಿಪ್ರಾಯ.

ಗುರುವೇ ಸರ್ವಲೋಕಾನಾಂ ಭಿಷಜೆ ಭವರೋಗಿಣಾಂ ।

ನಿಧಯೇ ಸರ್ವವಿದ್ಯಾನಾಂ ದಕ್ಷಿಣಾಮೂರ್ತಯೇ ನಮಃ ॥

ಸರ್ವಲೋಕಗಳಿಗೆ ಗುರುವು ಭವರೋಗಿಗಳಿಗೆ ವೈದ್ಯನೂ, ಸರ್ವವಿದ್ಯೆಗಳಿಗೆ ನಿಧಿಯೂ ಆದ ದಕ್ಷಿಣಾಮೂರ್ತಿಗೆ ನಮಸ್ಕಾರ. ಎಂದು ಈ ದೇವತೆಯನ್ನು ಪ್ರಾರ್ಥಿಸುವುದು ರೂಢಿಯಲ್ಲಿದೆ. ದಕ್ಷಿಣಾಮೂರ್ತಿ ವಿದ್ಯೆಗೆ ಅಧಿಷ್ಠಾತೃ ದೇವತೆ ಎಂದು ಉಪನಿಷತ್ತು ಮತ್ತು ಸ್ತೋತ್ರಗಳಿಂದ ತಿಳಿದು ಬರುತ್ತದೆ. ವ್ಯಾವಹಾರಿಕ ರೂಪದ ಉಪದೇಶ ಮಿಥ್ಯೆಯಾದ ಕಾರಣ ಜ್ಞಾನ (ಬ್ರಹ್ಮ) ಮೂರ್ತಿಯಾದ ಈ ದೇವತೆ ಮುಖದಿಂದ ಯಾವ ಉಪದೇಶವನ್ನೂ ಮಾಡುವುದಿಲ್ಲ. ಆದ ಕಾರಣ ಈ ಮೂರ್ತಿಯ ಗುರುರೂಪವಾದ ಉಪದೇಶ ಮೊನವಷ್ಟೇ. ಶಿಷ್ಯರು ಈ ಮುದ್ರೆಯಿಂದಲೇ ಸಂಶಯಮುಕ್ತರಾಗಿ ಜ್ಞಾನಿಗಳಾಗುತ್ತಾರೆ. ಇತರ ದೇವತೆಗಳಿಗೆ ಪುರಾಣಪ್ರಸಿದ್ಧಿ ಇರುವಂತೆ ಈ ದೇವತೆಯ ವಿಚಾರ ಪುರಾಣಗಳಲ್ಲಿ ಅಧಿಕವಾಗಿ ಕಂಡು ಬರುವುದಿಲ್ಲ. ಮಂತ್ರಶಾಸ್ತ್ರಕ್ಕೆ ಸಂಬಂಧಪಟ್ಟ ಉಪಾಸನಾದಿ ವಿಭಾಗಗಳಲ್ಲಿ ಈ ದೇವತೆಯ ವಿಚಾರವಿದೆ. ಜ್ಞಾನವನ್ನು ಬಯಸುವವರು ಈ ದೇವತೆಯನ್ನು ಉಪಾಸನೆ ಮಾಡುತ್ತಾರೆ. ಅನೇಕ ಮರಗಳ ನೆರಳುಗಳಿಂದ ಬಿಸಿಲಿಲ್ಲದೆ ತಂಪಾದ ಗಿರಿತೊರೆಗಳಿಂದ ಕೂಡಿರುವ ಲತಾಪುಷ್ಪ ಸಮೃದ್ಧವಾದ ದುಂಬಿಗಳ ಝೇಂಕಾರ, ನವಿಲುಗಳ ನರ್ತನ, ಕೋಗಿಲೆಗಳ ಇಂಪಾದ ಧ್ವನಿ, ಹಾವು–ಮುಂಗುಸಿ, ಹಸು–ಹುಲಿ ಮೊದಲಾದ ವೈರ ಪ್ರಾಣಿಗಳೂ ತಮ್ಮ ವೈರವನ್ನು ಮರೆತು ವಿಹರಿಸುತ್ತಿರುವ, ಶುಕನೇ ಮೊದಲಾದ ಮುನಿಗಳು ಮತ್ತು ಇಂದ್ರಾದಿ ದೇವತೆಗಳಿಂದ ಸೇವಿತರಾದ ಸಿದ್ಧಿ ಕಿನ್ನರರ ವಾಸಸ್ಥಳವಾದ ಮೇರು ಪರ್ವತ ಪ್ರದೇಶದಲ್ಲಿ ಗರುಡ ಶಿಲೆಯ ಎಲೆಗಳು, ಪದ್ಮರಾಗದ

ಹಣ್ಣುಗಳು, ನವರತ್ನದ ಬಿಳಿಲುಗಳು ಹಾಗೂ ಸುಗುಂಧವನ್ನು ಬೀರುವ ಹೂಗಳಿಂದ ಕೂಡಿದ ಎತ್ತರವಾದ ಒಂದು ಆಲದ ಮರವಿದೆ. ಆ ಮರದ ಕೆಳಗೆ ರತ್ನ ಸಿಂಹಾಸನದ ಮೇಲೆ ಶರತ್ಕಾಲದ ಚಂದ್ರಕಾಂತಿಯನ್ನು ಬೀರುವ ಮುಖದಿಂದ ಕೂಡಿದ ದಕ್ಷಿಣಾಮೂರ್ತಿ ಮಂಡಿಸಿದ್ದಾನೆ. ಮುನಿಗಳ ಗುಂಪು ಈತನನ್ನು ಯಾವಾಗಲೂ ಸ್ತುತಿಸುತ್ತಿದ್ದಾರೆ. ಈ ಸ್ವರೂಪದಿಂದ ಜಗತ್ತಿಗೆ ಮೊದಲಿಗನಾದ ದಕ್ಷಿಣಾಮೂರ್ತಿಯನ್ನು ಸ್ಮರಿಸಬೇಕು ಎಂದು ಶಾರದತಿಲಕದಲ್ಲಿ ಹೇಳಿದೆ.

ಕರ್ಪೂರದಂತೆ ಶುಭ್ರನೂ, ತರ್ಕಮುದ್ರೆಯನ್ನು ಧರಿಸಿ ಬ್ರಹ್ಮತತ್ವವನ್ನು ತಿಳಿಸುವವನೂ, ಯೋಗಾಸನದಲ್ಲಿ ಮಂಡಿತನೂ ಆದ ದಕ್ಷಿಣಾಮೂರ್ತಿಯನ್ನು ಧ್ಯಾನಿಸಬೇಕೆಂದು ಶ್ರೀಮಾನಸೋಲ್ಲಾಸ ಗ್ರಂಥ ಹೇಳುತ್ತದೆ. ಬ್ರಹ್ಮತತ್ವವ್ನು ಬಯಸುವ ವೃದ್ಧರಾದ ಋಷಿಗಳ ಗುಂಪಿನಿಂದ ಆವೃತನಾದ ಜ್ಞಾನಮುದ್ರೆಯನ್ನು ಧರಿಸಿ ಆನಂದಮೂರ್ತಿಯೂ ಮೌನರೂಪ ವ್ಯಾಖ್ಯಾನದಿಂದ ಬ್ರಹ್ಮತತ್ವವನ್ನು ಪ್ರಕಟಿಸುತ್ತಿರುವ ತರುಣನೂ ಆದ ದಕ್ಷಿಣಾಮೂರ್ತಿಯನ್ನು ಸ್ಮರಿಸಬೇಕೆಂದು ಶ್ರೀತತ್ವಸುಧೆ ತಿಳಿಸುತ್ತದೆ.

ವೀಣೆ, ಮುತ್ತಿನ ಜಪಮಾಲೆ ಪುಸ್ತಕ ಜ್ಞಾನಮುದ್ರೆ ಅಥವಾ ಅಗ್ನಿನಾಗಗಳನ್ನು ಚತುರ್ಭುಜಗಳಲ್ಲಿ ಧರಿಸಿ ಬೆಳ್ಳಿಯಂತೆ ಶುಭವರ್ಣದಿಂದ ಕೂಡಿದ ಭಸ್ಮಲೇಪಿತ ಶರೀರವುಳ್ಳವನೂ ಯೋಗಾಸನಾರೂಢನೂ ಆಗಿರುವಂತೆ ಈ ದೇವತೆಯ ಸ್ವರೂಪ ದಕ್ಷಿಣಾಮೂರ್ತಿ ಉಪನಿಷತ್ತಿನಲ್ಲಿ ವರ್ಣಿತವಾಗಿದೆ.

ಜ್ಞಾನಾದಿದೈವವಾದುದರಿಂದ ಮೇಧಾ ದಕ್ಷಿಣಾಮೂರ್ತಿ ಎಂಬ ಹೆಸರು ಮಂತ್ರೋದ್ಧಾರದಲ್ಲಿ ಕಂಡು ಬರುತ್ತದೆ. ಪ್ರಳಯ ಕಾಲದಲ್ಲಿ ಎಲ್ಲವನ್ನೂ ತನ್ನಲ್ಲಿ ಸಂಹರಿಸಿಕೊಂಡು ಸ್ವಾತ್ಮನಂದ ಸುಖದಲ್ಲಿ ವಿಹರಿಸುವ ಈಶ್ವರನ ಸ್ವರೂಪವೇ ದಕ್ಷಿಣಾಮೂರ್ತಿ. ಈ ದಕ್ಷಿಣ ಮುಖನಾದ ಶಿವ ಪ್ರತ್ಯಕ್ಷನಾದರೆ ತತ್ತ್ವಜ್ಞಾನ ಸಿದ್ದಿಸುತ್ತದೆ.

## ಮೃತ್ಯುಂಜಯ

ಶಿವನಿಗೆ ಮೃತ್ಯುಂಜಯನೆಂಬ ಅನ್ವರ್ಥನಾಮವೊಂದಿದೆ. ಅಪಮೃತ್ಯುವನ್ನು ದೂರ ಮಾಡುವವನೇ ಮೃತ್ಯುಂಜಯನು. ಮೃತ್ಯುವೆಂದರೆ ಸಾವು, ಮರಣ, ಪ್ರಾಣ ಹೋಗುವುದು ಎಂದೇ ಅರ್ಥವಲ್ಲ. ರೋಗರುಜಿನಾದಿಗಳು, ಆಧ್ಯಾತ್ಮಿಕ, ಆದಿದೈವಿಕ, ಆದಿಭೌತಿಕವಾದ ತಾಪತ್ರಯಗಳೆಲ್ಲವೂ ಮೃತ್ಯುವೆನಿಸುತ್ತದೆ. ಅಶಾಂತಿಗೆ ಕಾರಣವಾದುದೆಲ್ಲ ಮೃತ್ಯುವೇ. ಇಂಥ ಮೃತ್ಯುವನ್ನು ಗೆದ್ದ ನಿತ್ಯಾನಂದ, ಸಹಜಾನಂದ ಸ್ವರೂಪನಿಷ್ಠವಾದ ಏಕೈಕ ದೇವತೆ ಶಂಕರ.

ಸರ್ವಮಾನವರು, ಸದಾಕಾಲ ಸುಲಭವಾಗಿ ಜಪಿಸಬಹುದಾದ ಸರಳ ಮಂತ್ರ ಶಿವಪಂಚಾಕ್ಷರಿ ಮಂತ್ರ. ಕಾಶಿಯಲ್ಲಿರುವ ವಿಶ್ವನಾಥನು ಶ್ರೀರಾಮ ತ್ರಯೋದಾಶಕ್ಷರಿ ಮಂತ್ರವನ್ನು, ರಾಮೇಶ್ವರದಲ್ಲಿರುವ ಶ್ರೀರಾಮಚಂದ್ರನು ಶಿವಪಂಚಾಕ್ಷರಿ ಮಂತ್ರವನ್ನು ಭಕ್ತರಿಗೆ ಉಪದೇಶಿಸುತ್ತಾರೆ ಎಂಬ ನಂಬಿಕೆಯುಂಟು.

ಶಿವಪಂಚಾಕ್ಷರಿ ಜಪನಿಷ್ಠರಿಗೆ ಆಕಾಶಾದಿ ಪಂಚಭೂತಗಳಿಂದ ಯಾವ ತೊಂದರೆಯೂ ಆಗುವುದಿಲ್ಲ. ಪಂಚಾಂಗಗಳು ಇಂಥವನಿಗೆ ಮಂಗಳಕರವಾಗುತ್ತದೆ. ಪಂಚಕರ್ಮೇಂದ್ರಿಯ, ಜ್ಞಾನೇಂದ್ರಿಯಗಳು ಶುದ್ಧವಾಗುತ್ತದೆ. ಪಂಚಕೋಶಗಳನ್ನು ದಾಟಿ ಬ್ರಹ್ಮಜ್ಞಾನಿಯಾಗಿ ಶಿವಸಾಯುಜ್ಯವನ್ನು ಹೊಂದಬಹುದು.

## ಎಲ್ಲರೂ ಅತೀತ

ತನ್ನ ಕೈಗಳಲ್ಲಿ ಎದೆ, ತಲೆಗಳಲ್ಲಿ ನಾಗರಹಾವುಗಳನ್ನು ಆಭರಣವಾಗಿ ಧರಿಸಿದ್ದು, ವಿಷದಿಂದ ಪರಶಿವನಿಗೆ ಮರಣ ಭಯ ಇರುವುದಿಲ್ಲ. ತನ್ನ ತಲೆಯ ಮೇಲೆ ಚಂದ್ರನನ್ನು ಧರಿಸಿ ಅಮೃತಬಿಂದುಗಳು ಸುರಿಯುತ್ತಿದ್ದರೂ ವಿಶೇಷವಾದ ಅನುರಾಗವೇನೂ ಇಲ್ಲ.

ಸ್ಮಶಾನದಲ್ಲಿ ವಾಸಿಸುತ್ತ, ಬೂದಿ ಬಳಿದುಕೊಂಡಿದ್ದರೂ ಯಾವ ದುಃಖವಾಗಲಿ ಬೇಜಾರಾಗಲಿ ಇಲ್ಲ. ಪಾರ್ವತಿಯನ್ನು ತೊಡೆಯ ಮೇಲೆ ಕೂಡಿಸಿಕೊಂಡು ಅರ್ಧನಾರೀಶ್ವರನಾಗಿದ್ದರೂ ಯಾವ ಸುಖಾತಿಶಯವೂ ಉಂಟಾಗುತ್ತಿಲ್ಲ.

ಹೆಣದ ತಲೆಬುರುಡೆಗಳ ಮಾಲೆಯನ್ನಾಗಿ ಧರಿಸಿದ್ದರೂ ಮೈಲಿಗೆ ಎನ್ನುವುದಿಲ್ಲ. ತನ್ನ ಜಟೆಯಲ್ಲಿ ದಿವ್ಯ ಗಂಗೆಯನ್ನು ಧರಿಸಿದ್ದರೂ ಶುದ್ಧಿ ಎಂಬುದಿಲ್ಲ. ಹೀಗೆ ದ್ವಂದ್ವಾತೀತನಾತ ಪರಶಿವನು ಸದಾ ಸ್ವಸ್ಥನು ಶಿವನೂ ಸ್ವಾತ್ಮಾರಾಮನೂ ನಿರ್ವಿಕಾರಿಯೂ ಶಾಂತನೂ ಆಗಿರುತ್ತಾನೆ! ನಿರಾಡಂಬರನಾದ ಶಿವಲಿಂಗಕ್ಕೆ ಅಭಿಷೇಕ ಮಾಡಿದರೆ ಸಾಕು ಭಕ್ತರಿಗೆ ಒಲಿದು ಬೇಡಿದ ವರಗಳನ್ನು ನೀಡುವ ಕರುಣಾಮಯಿ ಈತ.

ಬಾಹ್ಯ ವಿಷಯಗಳಿಂದ ತನ್ನ ಕಣ್ಣುಗಳನ್ನು ಒಳಗೆಡೆಗೆ ಸೇರಿಸಿಕೊಂಡು ಆತ್ಮನಲ್ಲಿಯೇ ನೆಲೆಗೊಳಿಸಿದ ಧೀರ ನಮ್ಮ ಶಿವ; ಸದಾ ಓಂಕಾರನಾದವನ್ನೇ ಶ್ರವಣ ಮಾಡುವ ಅಂತಮುರ್ಖಿಯೇ ಶಿವ; ಅನಾತ್ಮ ವಸ್ತುಗಳ ಗಂಧದಿಂದ ದೂರವಿರುವನು; ರುಚಿಯನ್ನು ಜಯಿಸಿದ ಧೀಮಂತ, ಸ್ಪರ್ಶ ಸುಖದಿಂದ ದೂರವಿರುವ ತಪೋಮೂರ್ತಿ; ಮೌನಿಯಾಗಿ ನಾಲಿಗೆಯನ್ನು ಗೆದ್ದವನು; ಚಾಪಲ್ಯರಹಿತನಾಗಿ ಶಾಂತನಾಗಿದ್ದವನು; ಎಲ್ಲೂ ಚಲಿಸದ ಕೂಟಸ್ಥನಾಗಿದ್ದ ತಪಸ್ವಿಯಿವನು, ವಿವೇಕ ವೈರಾಗ್ಯಗಳಿಂದ ಕಾಮಲೀಲೆಯನ್ನು ಗೆದ್ದವನು; ಬುದ್ಧಿ ಸ್ಥಿಮಿತವುಳ್ಳವನು, ಚಿತ್ತ ವೃತ್ತಿಗಳನ್ನು ನಾಶ ಮಾಡಿಕೊಂಡಿರುವವನು; ಅಹಂಕಾರ ಭಸ್ಮ ಮಾಡಿದ ಶಿವನನ್ನು, ಹದಿನಾಲ್ಕ ಇಂದ್ರಿಯಗಳನ್ನು ಜಯಿಸಿರುವ ಪ್ರಭುವನ್ನು ಹದಿನಾಲ್ಕು ಲೋಕದ ಜನರು ಅಂದು ಪೂಜಿಸುವುದು ಯುಕ್ತ.

## ಆತ್ಮಜ್ಞಾನದ ಉಪದೇಶ

ಶಿವ ನಟರಾಜನಾಗಿ; ತ್ರಿಪುರಾಂತನಾಗಿ, ಕಿರಾತಕನಾಗಿ ಪ್ರಸಿದ್ಧನಾಗಿರುವಂತೆ ದಕ್ಷಿಣಾಮೂರ್ತಿಯಾಗಿಯೂ ಸುಪ್ರಸಿದ್ಧನಾಗಿರುತ್ತಾನೆ. ಆಧ್ಯಾತ್ಮ ಜ್ಞಾನಪಿಪಾಸುಗಳು ಶಿವನ್ನು ದಕ್ಷಿಣಾಮೂರ್ತಿ ರೂಪದಿಂದ ಆರಾಧನೆ ಮಾಡಿದರೆ ಶಿವನು ಆತ್ಮಜ್ಞಾನವನ್ನೇ ಕರುಣಿಸುತ್ತಾನೆ. ಸಾಮಾನ್ಯವಾಗಿ ಉತ್ತರ ಅಥವಾ ಪೂರ್ವಕ್ಕೆ ಮುಖ ಮಾಡಿಕೊಂಡು ಜಪಾದಿ ಅನುಷ್ಠಾನ ಮಾಡುವುದು ಅಭ್ಯುದಯ ಫಲಗಳನ್ನು ಕೊಡುವ ಕರ್ಮೋಪಾಸನೆಗಳು. ಆದರೆ ಶಿವನು ದಕ್ಷಿಣಾಭಿಮುಖವಾಗಿ ಉಪದೇಶ ಮಾಡುತ್ತಿರುವುದು ಮೋಕ್ಷಸಾಧನವಾದ ಆತ್ಮಜ್ಞಾನವನಲ್ಲವೇ? ಸನಕ, ಸನಂದನ, ಸನತ್ಕುಮಾರ, ಸಂನ್ಯಾಸಿಗಳಿಗೆ ಶಿವನು ಬಾಲದಕ್ಷಿಣಮೂರ್ತಿಯಾಗಿ ತೋರಿಕೊಂಡು ಮೌನದಿಂದ ಆತ್ಮಜ್ಞಾನವನ್ನು ಉಪದೇಶಿಸಿದನು.

## ಜ್ಞಾನೋದಯದ ಶಿವರಾತ್ರಿ

ಜ್ಞಾನಸ್ವರೂಪಿಯಾದ ಶಿವನೇ ತಾನೆಂದು ಅರ್ಥಮಾಡಿಕೊಂಡು ವಿದ್ಯೆಯು ನಾಶವಾಗಿ ಜ್ಞಾನೋದಯವಾಗುವುದೇ ಶಿವರಾತ್ರಿ. ಪಂಚಕೋಶಗಳಿಗೂ ಸಾಕ್ಷಿಯಾದ ಆತ್ಮನೇ ತಾನೆಂದು ಮತ್ತೆ ಮತ್ತೆ ಅನುಸಂಧಾನ ಮಾಡುವುದೇ ಶಿವಾಭಿಷೇಕವು, ಇಂದ್ರಿಯ ಮನೋಬುದ್ಧಿಗಳನ್ನು ಅನಾತ್ಮ ವಿಷಯ ಚಿಂತನೆಯಿಂದ ಬಿಡಿಸಿ ಆತ್ಮನಲ್ಲಿಯೇ ನೆಲೆಗೊಳ್ಳುವುದು ಉಪವಾಸವು.

ಅವಿದ್ಯೆಯನ್ನು ದೂರ ಮಾಡಿಕೊಂಡು ಶಿವನೇ ತಾನೆಂದು ದೃಢವಾಗಿ ಧೈರ್ಯವಾಗಿ ತಿಳಿಯುವುದೇ ಜಾಗರಣೆ. ಶಿವನು ತ್ಯಾಗ, ವೈರಾಗ್ಯ, ಶಾಂತಿ, ಸಹಿಷ್ಣುತೆ, ಸಮಭಾವ, ತಪಸ್ಸು ಸಹಜಾನಂದ, ಸರಳತೆಗೆ ಆದರ್ಶವಾದ ದೇವನು. ಭವಾನಿಯ ಪಾಣಿಯನ್ನು ಹಿಡಿದ್ದರಿಂದ ಭವನು ಅತ್ಯಂತ ಎತ್ತರಕ್ಕೆ ಬೆಳೆದುಬಿಟ್ಟನು. ಇವರಿಬ್ಬರೂ ಜೊತೆಯಲ್ಲಿ ಸೇರಿಕೊಂಡೇ ಜಗತ್ತಿಗೆ ತಾಯಿ–ತಂದೆಯರಾಗಿರುತ್ತಾರೆ.

ಪರಮೇಶ್ವರ ಎಂದ ಕೂಡಲೇ ಅವನ ಜೊತೆಯಲ್ಲೆ ವೈದಿಕ ವಿದ್ವಾಂಸರುಗಳಿಗೆ ನೆನಪಾಗುವ ಮತ್ತೊಂದು ಶಬ್ದ ಮಹಾನ್ಯಾಸ. ನ್ಯಾಸ ಎಂದರೆ ಇಡುವುದು ಎಂದರ್ಥ. ಶಿವನ ಆರಾಧಕರು ತನ್ನ ಅಂಗಾಂಗಗಳಲ್ಲಿ ಹರಿಹರ, ಬ್ರಹ್ಮ, ಇಂದ್ರ, ಅಗ್ನಿ ಮುಂತಾದ ದೇವತೆಗಳನ್ನು ಆಹ್ವಾನಿಸಿಕೊಳ್ಳುವುದು ಮಹಾನ್ಯಾಸವು. ಹೀಗೆ ರುದ್ರನ ಆರಾಧಕ ತಾನು ಸ್ವತಃ ರುದ್ರ ಸ್ವರೂಪನೇ ಆಗಿ ನಂತರ ರುದ್ರನನ್ನು ಆರಾಧಿಸಬೇಕು. ಸ್ವತಃ ರುದ್ರನಾಗದವನು ರುದ್ರನನ್ನು ಆರಾಧಿಸಲಾರನು. ಇಂತಹ ಮಹಾನ್ಯಾಸ ಪೂರ್ವಕವಾಗಿ ಅಭಿಷೇಕ ಮಾಡಿದರೆ ಶಿವನು ಸುಪ್ರೀತನಾಗುತ್ತಾನೆ. ಓಂ

### ಸಂಪ್ರೀತಿ ಸುಘೋಷ



ಮನುಷ್ಯ ಎಷ್ಟೇ ಬಲಶಾಲಿಯಾದರೂ
ದೌರ್ಬಲ್ಯ ಮೂಡಿದಲ್ಲಿ
ಏನನ್ನೂ ಸಾಧಿಸಲಾಗದು,
ಪ್ರಯತ್ನಶೀಲನಾದಾಗ
ಮಾತ್ರ ಉದ್ದಿಷ್ಟ ಗುರಿಯನ್ನು
ಮುಟ್ಟಲು ಸಾಧ್ಯ

ಡಾ. ಬಾಲಗಂಗಾಧರನಾಥ ಮಹಾಸ್ವಾಮೀಜಿ

### ಪ್ರಕೃತಿ–ವಿಕೃತಿ–ಸಂಸ್ಕೃತಿ

ಆಸೆ ಪ್ರಕೃತಿ, ದುರಾಸೆ ವಿಕೃತಿ,
ಸದಾಶಯ ಸಂಸ್ಕೃತಿ.

# ಮಾಡಿದವರ ಪಾಪ ಆಡಿದವರ ಬಾಯಲ್ಲಿ

✍ ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ
ಸಿರಿಗೆರೆ

ನ್ಯಾಯಾಲಯಗಳ ಇತಿಹಾಸದಲ್ಲಿ ಕಂಡು ಕೇಳರಿಯದ ಅಚ್ಚರಿಯ ಘಟನೆ. ನ್ಯಾಯಾಧೀಶರೊಬ್ಬರು ಒಂದು ಕೊಲೆ ಕೇಸಿನ ವಿಚಾರಣೆ ನಡೆಸುತ್ತಿದ್ದರು. ಆರೋಪಿಯು ಕೊಲೆ ಮಾಡಿದ್ದಾನೆಂದು ಸಾಕ್ಷ್ಯಾಧಾರಗಳಿಂದ ಸಾಬೀತಾಯಿತು. ಕೊಲೆ ಮಾಡಿದ ಅಪರಾಧಿಗೆ ಮರಣ ದಂಡನೆ ವಿಧಿಸಬೇಕಾಗಿತ್ತು. ಆದರೆ ನ್ಯಾಯಾಧೀಶರು ತೀರ್ಪಿಗೆ ಸಹಿ ಮಾಡಲಿಲ್ಲ. ದೇವರು ಈ ಮನುಷ್ಯನನ್ನು ಸೃಷ್ಟಿಸಿದ್ದಾನೆ. ಇವನನ್ನು ಸಾಯಿಸಲು ನಾನು ಯಾರು? ಎಂದು ತೆರೆದ ಕೋರ್ಟಿನಲ್ಲಿ ಹೇಳಿ ತಲೆಯ ಮೇಲೆ ಧರಿಸಿದ್ದ ವಿಗ್ಗನ್ನು ಕಳಚಿ ಮೇಜಿನ ಮೇಲಿಟ್ಟು ನ್ಯಾಯಾಪೀಠದಿಂದ ಎದ್ದು ನಿಂತು ಹೊರನಡೆದರು. ನ್ಯಾಯಾಲಯದಲ್ಲಿದ್ದವರೆಲ್ಲರೂ ಬೆಕ್ಕಸ ಬೆರಗಾದರು. ಅವರು ಮತ್ತೆಂದೂ ನ್ಯಾಯಾಲಯಕ್ಕೆ ಬರಲಿಲ್ಲ. ಅಪ್ಪಟ ಭಾರತೀಯ ಸಂಪ್ರದಾಯಸ್ಥರಾದ ಅವರು ನ್ಯಾಯದೀಶರ ಹುದ್ದೆಯನ್ನೇ ತ್ಯಜಿಸಿ ಸನ್ಯಾಸಿಗಳಾದರು. ಈ ಪ್ರಕರಣ ನಡೆದದ್ದು ಬೆಂಗಳೂರಿನ ಉಚ್ಚ ನ್ಯಾಯಾಲಯದಲ್ಲಿ ಬ್ರಿಟೀಷರ ಆಳ್ವಿಕೆಯ ಕಾಲದಲ್ಲಿ 19ನೇ ಶತಮಾನದ ಉತ್ತರಾರ್ಧದಲ್ಲಿ ನಡೆಯಿತೆನ್ನಲಾದ ಈ ಘಟನೆ ನಿಜವೋ, ಕಪೋಲಕಲ್ಪಿತವೋ ಖಚಿತಪಡಿಸಿಕೊಳ್ಳಲು ಆಗಿಲ್ಲ. ನಮಗೆ ಈ ವಿಷಯ ತಿಳಿದದ್ದೇ ಎರಡು ತಿಂಗಳ ಹಿಂದೆ ಅಮೇರಿಕದ ಹವಾಯಿ ದ್ವೀಪಕ್ಕೆ ಹೋದಾಗ ಭಾರತದ ಹೊರಗೆ ಹೋದಷ್ಟೂ ಭಾರತದ ಹಿರಿಮೆ ಗರಿಮೆ ಹೆಚ್ಚು ಅರ್ಥವಾಗುತ್ತದೆ ಎಂದು ಇಂದೇ ಅಂಕಣದಲ್ಲಿ ಹಿಂದೆ ಬರೆದ ಮಾತಿಗೆ ಇದೊಂದು ಉದಾಹರಣೆ.

ಹವಾಯಿ ಅಮೇರಿಕೆಯ 50 ರಾಜ್ಯಗಳಲ್ಲಿ ಒಂದು ಫೆಸಿಫಿಕ್ ಮಹಾಸಾಗರದಲ್ಲಿರುವ ಎಂಟು ಪ್ರಮುಖ ದ್ವೀಪಗಳ ಸಮುಚ್ಚಯ. ಇವುಗಳಲ್ಲಿ ಒಂದಾದ ಕವಾಯಿ ಎಂಬ ದ್ವೀಪದಲ್ಲಿ ನಯನ ಮನೋಹರವಾದ ಪ್ರಾಕೃತಿಕ ಸೊಬಗಿನಿಂದ ಕೂಡಿದ ಸುಮಾರು 400 ಎಕರೆ ವಿಸ್ತಾರವುಳ್ಳ ತಮಿಳು ಶೈವಸಿದ್ಧಾಂತ ಸಂಪ್ರದಾಯದ ಹಿಂದೂ ಆಶ್ರಮವಿದೆ. ಇದರಲ್ಲಿ ಹತ್ತಾರು ಅಮೇರಿಕನ್ ಹಿರಿಯ ಸನ್ಯಾಸಿಗಳಿದ್ದಾರೆ. ಜಟಾಧಾರಿಗಳೂ, ಕಾಷಾಯ ವಸ್ತ್ರಧಾರಿಗಳೂ, ಶಿವನ ಆರಾಧಕರೂ ಆದ ಇವರ ಕೊರಳಲ್ಲಿರುವ ತ್ರಿಪುಂಡ್ರ, ಭ್ರೂಮಧ್ಯೆ ಇರುವ ಕುಂಕುಮ ನೋಡಿದಾಗ ಪುರಾಣ ಕಾಲದ ಭಾರತೀಯ ಋಷಿಮುನಿಗಳೇ ಇಲ್ಲಿಗೆ ವಲಸೆ ಬಂದು ನೆಲೆಸಿದಂತೆ ಕಾಣಿಸುತ್ತಾರೆ.

ಕಳೆದ ಆಗಸ್ಟ್ ತಿಂಗಳು ಇವರ ಆಶ್ರಮಕ್ಕೆ ಹೋದಾಗ Hinduism Today ಎಂಬ ಅಂತರಾಷ್ಟ್ರೀಯ ಪತ್ರಿಕೆಯ ಮುಖ್ಯ ಸಂಪಾದಕರೂ, ಹಿರಿಯ ಸನ್ಯಾಸಿಗಳಾದ ಪರಮಾಚಾರ್ಯ ಸದಾಶಿವನಾಥಸ್ವಾಮೀಜಿಯವರು ನಮ್ಮನ್ನು ತುಂಬಾ ಗೌರವಾದರಗಳಿಂದ ಬರಮಾಡಿಕೊಂಡರು. ಆಶ್ರಮದ ಸುತ್ತ ಇದ್ದ ದಟ್ಟ ಅರಣ್ಯಕ್ಕೆ ನಮ್ಮನ್ನು ಕರೆದೊಯ್ದರು. ದೊಡ್ಡ ದೊಡ್ಡ ರುದ್ರಾಕ್ಷಿ ಮರಗಳು, ಅವುಗಳ ಮಧ್ಯೆ ತಮಿಳು ಶೈವ ಸಂಪ್ರದಾಯದಲ್ಲಿ 63 ಪುರಾತನರೆಂದು ಖ್ಯಾತಿ ಪಡೆದ ತಿರುಮೂಲರ್ ಮೊದಲಾದ ಅನೇಕ ಅನುಭವಿಗಳ ಋಷಿಮುನಿಗಳ ಶಿಲಾಮೂರ್ತಿಗಳು ಕಂಗೊಳಿಸುತ್ತಿದ್ದವು. ಅವುಗಳ ಸಾಲಿನಲ್ಲಿ ನಮ್ಮ ದೃಷ್ಟಿಗೆ ಬಿದ್ದ ವಿಗ್ರಹ ಕುದ್ಯೆತ್ ಸ್ವಾಮಿ. ಇವರೇ ಮರಣ ದಂಡನೆಯನ್ನು ವಿಧಿಸಲು ನಿರಾಕರಿಸಿ ಸನ್ಯಾಸಿಯಾದ ಬೆಂಗಳೂರು ಉಚ್ಚ ನ್ಯಾಯಾಲಯದ ನ್ಯಾಯಾದೀಶ ಸಂತ! ತಮ್ಮ ಮುಂದೆ ವಿಚಾರಣೆಗೆ ಬಂದ ಕೊಲೆ ಪ್ರಕರಣವು  ಜೀವನ-ಮರಣದ ಬಗ್ಗೆ ಇವರ ಗಂಭೀರ ಚಿಂತನೆಗೆ ಪ್ರೇರಣೆಯಾಗುತ್ತದೆ. ಮುಂದೆ ಇವರು ಕಾಲ್ನಡಿಗೆಯಲ್ಲಿ ಹಳ್ಳಿ-ಹಳ್ಳಿ ತಿರುಗಿ ಆಧ್ಯಾತ್ಮ ಪಥದಲ್ಲಿ ಸಾಗಿ ಶ್ರೀಲಂಕಾದ ಜಾಫಾದಲ್ಲಿ ನೆಲೆಸುತ್ತಾರೆ. ಅಲ್ಲಿನ ತಮಿಳು ಶೈವರ ಆರಾಧ್ಯ ಗುರುವಾಗಿ 1891 ಅಕ್ಟೋಬರ್ 13 ರಂದು ಸಮಾಧಿಸ್ಥರಾಗುತ್ತಾರೆ.

ಇವರು ನ್ಯಾಯಾಧೀಶರಾಗಿದ್ದಾಗ ನಿಯಮಾನುಸಾರ ಕೊಲೆಪಾತಕಿಗೆ ಮರಣದಂಡನೆಯನ್ನು ವಿಧಿಸದೆ ಹೊರನಡೆದದ್ದು ತಪ್ಪಲ್ಲವೇ? ಕರ್ತವ್ಯಚ್ಯುತಿಯಲ್ಲವೇ? ನಿಜ. ಕೊಲೆಪಾತಕಿಗಳನ್ನು ಸಮಾಜದ ಹಿತದೃಷ್ಟಿಯಿಂದ ದಂಡಿಸುವುದು ನ್ಯಾಯೋಚಿತ. ಆದರೆ ಈ ವಿಚಾರವಾಗಿ ಭಾರತೀಯ ಧರ್ಮಶಾಸ್ತ್ರಗಳಲ್ಲಿ ಒಮ್ಮತದ ಅಭಿಪ್ರಾಯವಿಲ್ಲ. 'ಮಹತ್ಸ್ವಪ್ಯಪರಾಧೇಷು ದಂಡಂ ಪ್ರಾಣಾಂತಿಕಂ ತ್ಯಜೇತ್! ಋತೇ ರಾಜ್ಯಾಪಹಾರಾತ್ತು ಯುಕ್ತದಂಡ: ಪ್ರಶಸ್ಥತೇ॥' ಅಂದರೆ ದೇಶದ ಭದ್ರತೆಗೆ ಧಕ್ಕೆಯುಂಟುಮಾಡಿದ ವಂಚಕರಿಗೆ ಮಾತ್ರ ಮರಣದಂಡನೆ ವಿಧಿಸಬೇಕು. ಬೇರೆಯವರು ಎಷ್ಟೇ ದೊಡ್ಡ ಅಪರಾಧ ಮಾಡಿದ್ದರೂ ವಿಧಿಸಬಾರದು ಎಂಬ ಮಿತಿಯನ್ನು ಕೆಲವು ಧಮಶಾಸ್ತ್ರಗಳು ಹೇರುತ್ತವೆ. ಮಹಾಭಾರತದ ಶಾಂತಿಪವದಲ್ಲಿ ರಾಜನಾದ ದ್ಯುಮತ್ಸೇನ 'ಕೆಲವರು ಮರಣದಂಡನೆಗೆ ಹೆದರುವುದೇ ಇಲ್ಲ. ಅಪರಾಧಗಳನ್ನು ಮಾಡೇ ಮಾಡುತ್ತಾರೆ. ಅಂಥವರಿಗೆ ಮರಣದಂಡನೆ ವಿಧಿಸಲೇ ಬೇಕು' ಎಂದು ಹೇಳಿದರೆ ಯುವರಾಜನಾದ ಸತ್ಯವತ್ ಹಾಗೆ ಮಾಡಿದರೆ ಮರಣದಂಡನೆಗೆ ಒಳಗಾದವನ ತಾಯಿ, ಹೆಂಡತಿ ಮತ್ತು ಮಕ್ಕಳು ತುಂಬಾ ದುಃಖಕ್ಕೆ ಒಳಗಾಗುತ್ತಾರೆ. ಅವರು ತಮ್ಮ ಪ್ರಾಣವನ್ನೂ ಕಳೆದುಕೊಳ್ಳಬಹುದು. ಸರಿಯಲ್ಲ ಎಂದು ವಾದಿಸುತ್ತಾನೆ. ಆಧುನಿಕ ದಿನಮಾನಗಳಲ್ಲಿ ನ್ಯಾಯದಾನವು ವಿಳಂಬವಾಗುತ್ತಿರುವುದರಿಂದ ಮರಣದಂಡನೆಯೇ ಏಕೆ, ಬೇರೆ ಯಾವ ಶಿಕ್ಷೆಯ ಭಯವೇ ಯಾರಿಗೂ ಇಲ್ಲ. ಓಂ

# ವನ್ಯಜೀವಿ ದಿನ



ಬದಲಾಗುತ್ತಿರುವ ಪ್ರಕೃತಿಯ ಬಗ್ಗೆ ಜಾಗೃತಿ ಹಾಗು ಮಾಹಿತಿ ನೀಡಲು ವಿಶ್ವ ವನ್ಯಜೀವಿ ದಿನವನ್ನು ಆಚರಿಸಲಾಗುತ್ತದೆ. ಮಾನವನ ಚಟುವಟಿಕೆಗಳಿಂದ ವೃಕ್ಷ ಮತ್ತು ಪ್ರಾಣಿ ಜೀವ ಸಂಕುಲ ಸಮಸ್ಯೆ ಎದುರಿಸುತ್ತಿರುವ ವಿಚಾರದ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುವುದಾಗಿದೆ.

ಇಂದು 'ವಿಶ್ವ ವನ್ಯಜೀವಿಗಳ ದಿನ' (World Wildlife Day). ವನ್ಯಜೀವಿ ಸಸ್ಯ ಸಂಕುಲ ಹಾಗೂ ಪ್ರಾಣಿ ಸಂಕುಲದ ಕುರಿತಾಗಿ ಜನರಲ್ಲಿ ಜಾಗೃತಿ ಮೂಡಿಸುವ ಸಲುವಾಗಿ 2013 ರಿಂದ ಪ್ರತಿ ವರ್ಷ ಮಾರ್ಚ್ 3 ರಂದು ವಿಶ್ವ ವನ್ಯಜೀವಿಗಳ ದಿನವನ್ನು ಆಚರಣೆ ಮಾಡಲಾಗುತ್ತದೆ.

## ವಿಶ್ವ ವನ್ಯಜೀವಿಗಳ ದಿನದ ಹಿನ್ನಲೆ

ವಿಶ್ವಸಂಸ್ಥೆಯ ಜನರಲ್ ಅಸೆಂಬ್ಲಿ ಮಾರ್ಚ್ 3ನ್ನು ವಿಶ್ವ ವನ್ಯಜೀವಿ ದಿನವನ್ನಾಗಿ ಆಚರಿಸಲು ಡಿಸೆಂಬರ್ 20, 2013 ರಲ್ಲಿ ಘೋಷಣೆ ಮಾಡಿತು. ಪ್ರಾಣಿ ಸಂಕುಲ ಮತ್ತು ಸಸ್ಯ ಸಂಕುಲದ ಬಗ್ಗೆ ಅರಿವು ಮೂಡಿಸಲು ಈ ದಿನವನ್ನು ಆಚರಿಸಲು ತೀರ್ಮಾನಿಸಲಾಯಿತು. ವಿಶ್ವಸಂಸ್ಥೆಯ ಜನರಲ್ ಅಸೆಂಬ್ಲಿ, ಸಸ್ಯ ಹಾಗೂ ಪ್ರಾಣಿಗಳ ಪಾಮುಖ್ಯತೆಯನ್ನು ತಿಳಿಸುವುದು, ವನ್ಯಜೀವಿ ಸಂಕುಲದ ವಿವಿಧ ಕೊಡುಗೆಗಳನ್ನು ಗೌರವಿಸಲು ಈ ದಿನವನ್ನು ಮೀಸಲಿರಿಸಲಾಗಿದೆ.

## ವಿಶ್ವ ವನ್ಯಜೀವಿಗಳ ದಿನದ ಇತಿಹಾಸ

ಜಗತ್ತಿನ ಸಸ್ಯ ಹಾಗೂ ಪ್ರಾಣಿ ಪ್ರಭೇದಗಳ ಬಗ್ಗೆ ಜಾಗೃತಿ ಮೂಡಿಸುವುದು ವಿಶ್ವ ವನ್ಯಜೀವಿ ದಿನಾಚರಣೆಯ ಧ್ಯೇಯವಾಗಿದೆ. ಸಿಐಟಿಇಎಸ್ ಒಪ್ಪಂದಕ್ಕೆ 1973 ಮಾರ್ಚ್ 3 ರಂದು ಸಹಿ ಹಾಕಲಾಯಿತು. ಇದರ ನೆನಪಿಗಾಗಿ ಮಾರ್ಚ್ 3 ರಂದು ವನ್ಯಜೀವಿ ದಿನವನ್ನು ಆಚರಿಸಲಾಗುತ್ತದೆ. ಸಿಐಟಿಎಎಸ್ ಅಂತರಾಷ್ಟ್ರೀಯ ಒಪ್ಪಂದವಾಗಿದ್ದು, ವಿಶ್ವದಾದ್ಯಂತ ಸಸ್ಯ ಹಾಗೂ ವನ್ಯ ಜೀವಿ ಸಂಕುಲಗಳ ಮೇಲೆ ಹಾನಿ ಆಗದಂತೆ ನಿಗಾವಹಿಸುತ್ತದೆ.

ಪ್ರಪಂಚವು ಪ್ರತಿಯೊಂದು ಸಂಭಾವ್ಯ ಮಾಧ್ಯಮದಿಂದ ಅದ್ಭುತ ಜೀವಿಗಳಿಂದ ತುಂಬಿದೆ. ಗಾಳಿಯ ಪಕ್ಷಿಗಳಿಂದ ಸಮುದ್ರದ ಭವ್ಯವಾದ ತಿಮಿಂಗಿಲಗಳವರೆಗೆ, ವನ್ಯಜೀವಿಗಳು ಅತ್ಯಂತ ಅಸಾಮಾನ್ಯ ಮತ್ತು ಅನಿರೀಕ್ಷಿತ ಸ್ಥಳಗಳಲ್ಲಿ ಸಮೃದ್ಧವಾಗಿವೆ. ವನ್ಯಜೀವಿಗಳು ನಮಗೆ ಅನೇಕ ವಿಧಗಳಲ್ಲಿ ಪ್ರಯೋಜನವನ್ನು ನೀಡುತ್ತವೆ. ವಿಶ್ವ ವನ್ಯಜೀವಿ ದಿನವು ನಮ್ಮ ಜಗತ್ತಿಗೆ ನಮ್ಮ ಜವಾಬ್ದಾರಿಗಳನ್ನು ಮತ್ತು ನಾವು ಅದನ್ನು ಹಂಚಿಕೊಳ್ಳುವ ಜೀವನಶೈಲಿಯನ್ನು ನೆನಪಿಸುವ ದಿನವಾಗಿದೆ.

ನಾವು ಕೆಲವೊಮ್ಮೆ ಯೋಚಿಸಲು ಇಷ್ಟಪಡುತ್ತಿದ್ದರೂ ಸಹ, ಮಾನವರು ಭೂಮಿಯ ಮೇಲಿನ ಏಕೈಕ ಜೀವಿಗಳಲ್ಲ. ವಾಸ್ತವವಾಗಿ, ಪ್ರಾಣಿಗಳು ಮತ್ತು ಸಸ್ಯಗಳಿಂದ ಹಿಡಿದು ಶಿಲೀಂಧ್ರಗಳು ಮತ್ತು ಬ್ಯಾಕ್ಟೀರಿಯಾಗಳವರೆಗೆ ಇತರೆ ಜೀವಿಗಳಿಂದ ನಾವು ಹೆಚ್ಚು ಸಂಖ್ಯೆಯಲ್ಲಿರುತ್ತೇವೆ. ವನ್ಯಜೀವಿಗಳು ನಾವು ನಿಷ್ಕ್ರಿಯವಾಗಿ ಗಮನಿಸುವ ವಿಷಯವಲ್ಲ; ಇದು ನಮ್ಮ ಪ್ರಪಂಚದ

**ಮನೆ ಮದ್ದು**

ಪ್ರತಿದಿನ 25 ಗ್ರಾಂ ಎಳ್ಳನ್ನು ಅಗಿಯುವುದರಿಂದ ಹಲ್ಲುಗಳು ಬಲಗೊಳ್ಳುತ್ತವೆ. ವಸಡು ರೋಗ ಬರುವುದಿಲ್ಲ.

ಭಾಗವಾಗಿದೆ, ಮತ್ತು ನಾವು ಅತೀ ಕಾಳಜಿ ವಹಿಸಬೇಕಾಗಿದೆ. ವಿಶ್ವ ವನ್ಯಜೀವಿ ದಿನವು ಚಿಕ್ಕ ಕೀಟದಿಂದ ನೀಲಿ ತಿಮಿಂಗಿಲಗಳವರೆಗೆ ಎಲ್ಲಾ ವನ್ಯಜೀವಿಗಳನ್ನು ಆಚರಿಸಲು ನಿಮ್ಮ ಅವಕಾಶವಾಗಿದೆ. ವನ್ಯಜೀವಿಗಳ ಬಗ್ಗೆ ನೀವು ಏನೇ ಪ್ರೀತಿಸುತ್ತಿರಲಿ, ಅದನ್ನು ರಕ್ಷಿಸಲು ಸಹಾಯ ಮಾಡಲು ನೀವು ದಿನವನ್ನು ಗುರುತಿಸಬಹುದಾಗಿದೆ.

ಈ ದಿನವು ಪ್ರಪಂಚದಾದ್ಯಂತ ಕಾಡು ಸಸ್ಯ ಮತ್ತು ಪ್ರಾಣಿಗಳ ಬಗ್ಗೆ ಜಾಗೃತಿ ಮೂಡಿಸುವುದು. ನೀವು ಪ್ರಾಣಿಗಳನ್ನು ಪ್ರೀತಿಸುತ್ತಿರಲಿ, ನೀವು ಸಸ್ಯಗಳ ಬಗ್ಗೆ ಭಾವೋದ್ರಿಕ್ತರಾಗಿರಲಿ ಅಥವಾ ಹವಾಮಾನ ಬದಲಾವಣೆಯ ಬಗ್ಗೆ ಕಾಳಜಿ ವಹಿಸುತ್ತಿರಲಿ, ನಿಮ್ಮನ್ನು ಅಥವಾ ಇತರರಿಗೆ ಶಿಕ್ಷಣ ನೀಡಲು ನೀವು ಬಳಸಬಹುದಾದ ದಿನವಾಗಿದೆ. ನೀವು ಪ್ರಪಂಚದಾದ್ಯಂತ ನಂಬಲಾಗದ ಜೀವ ವೈವಿಧ್ಯತೆಯನ್ನು ಆಚರಿಸಬಹುದು ಮತ್ತು ಪ್ರಪಂಚವು ನೀಡುವ ಬೃಹತ್ ಶ್ರೇಣಿಯ ಸಸ್ಯ ಮತ್ತು ಪ್ರಾಣಿಗಳನ್ನು ಅನ್ವೇಷಿಸಲು ಬಹುಶಃ ಅಲ್ಲಿಗೆ ಹೋಗಬಹುದು. ವಿಶ್ವ ವನ್ಯಜೀವಿ ದಿನವನ್ನು ಆಚರಿಸುವುದು ನಮ್ಮ ಗ್ರಹವನ್ನು ಪ್ರೀತಿಸುವ ಯಾರಿಗಾದರೂ ಅತ್ಯಗತ್ಯವಾಗಿರುತ್ತದೆ.


## ವಿಶ್ವ ವನ್ಯಜೀವಿ ದಿನದ ಇತಿಹಾಸ

ಮಾರ್ಚ್ 3, 1973 ರಂದು ವಿಶ್ವಸಂಸ್ಥೆಯ ಜನರಲ್ ಅಸೆಂಬ್ಲಿ ಪ್ರಪಂಚದಾದ್ಯಂತ ಅಳಿವಿನಂಚಿನಲ್ಲಿರುವ ಪ್ರಭೇದಗಳನ್ನು ರಕ್ಷಿಸುವ ನಿಲುವನ್ನು ತೆಗೆದುಕೊಂಡಿತು. ಸಸ್ಯ ಅಥವಾ ಪ್ರಾಣಿಯಾಗಿರಲಿ, ಪಾಕಶಾಲೆಯಿಂದ ವೈದ್ಯಕೀಯದವರೆಗೆ ಮಾನವ ಜೀವನದ ಪ್ರತಿಯೊಂದು ಕ್ಷೇತ್ರದಲ್ಲೂ ಈ ಜಾತಿಗಳ ಪ್ರಾಮುಖ್ಯತೆಯನ್ನು ಕಡಿಮೆ ಮಾಡಲು ಸಾಧ್ಯವಿಲ್ಲ. ಈ ಸಮಯದಲ್ಲಿ ನೂರಾರು ಅಳಿವಿನಂಚಿನಲ್ಲಿರುವ ಪ್ರಭೇದಗಳು ಪ್ರತಿವರ್ಷ ಬೆದರಿಕೆಗೆ ಒಳಗಾಗುತ್ತಿದ್ದವು ಮತ್ತು ಅಳಿವಿನ ಪ್ರಮಾಣವು ದಿಗ್ಭ್ರಮೆಗೊಳಿಸುವ ಹೆಚ್ಚಿನ ಪ್ರಮಾಣದಲ್ಲಿತ್ತು. CITES ಅನ್ನು ಜಾರಿಗೆ ತರಲಾಯಿತು (ಅಳಿವಿನಂಚಿನಲ್ಲಿರುವ ಪ್ರಭೇದಗಳಲ್ಲಿ ಅಂತರರಾಷ್ಟ್ರೀಯ ವ್ಯಾಪಾರದ ಸಮಾವೇಶ) ಪ್ರಪಂಚವು ಮತ್ತೆಂದೂ ಕಾಣದಂತಹ ರಕ್ತಸ್ರಾವದ ಜಾತಿಗಳನ್ನು ಮುಂದುವರಿಸುವುದಿಲ್ಲ ಎಂದು ಖಚಿತಪಡಿಸಿಕೊಳ್ಳಲು.

ಡಿಸೆಂಬರ್ 20, 2013 ರಂದು ಜಗತ್ತಿನಲ್ಲಿ ಅಳಿವಿನಂಚಿನಲ್ಲಿರುವ ಪ್ರಭೇದಗಳ ದುರ್ಬಲತೆಯ ಅರಿವನ್ನು ಹರಡಲು ಸಹಾಯ ಮಾಡಲು ಮತ್ತೊಂದು ಹೆಜ್ಜೆಯನ್ನು ತೆಗೆದುಕೊಳ್ಳಲಾಯಿತು. ತನ್ನ 68 ನೇ ಅಧಿವೇಶನದಲ್ಲಿ, UN ಪ್ರತಿ ವರ್ಷ ವಿಶ್ವ ವನ್ಯಜೀವಿ ದಿನವನ್ನು ಹೊಸ ಉದ್ದೇಶ ಮತ್ತು ಕಲ್ಪನೆಗೆ ಮೀಸಲಿಡಲಾಗುವುದು ಎಂದು ಘೋಷಿಸಿತು, ನಮ್ಮ ಪ್ರಪಂಚದ ಬದಲಾಗುತ್ತಿರುವ ಸ್ವಭಾವ ಮತ್ತು ಪ್ರಾಣಿ ಮತ್ತು ಸಸ್ಯ ಸಾಮ್ರಾಜ್ಯದಿಂದ ನಾವು ಕಳೆದುಕೊಳ್ಳುವ ಸಂಪತ್ತು ನಾವು ಕಾಳಜಿ ವಹಿಸುವುದಿಲ್ಲ.

ಕೆಲವೊಮ್ಮೆ ದಿನವು ಅಳಿವಿನಂಚಿನಲ್ಲಿರುವ ಪ್ರಾಣಿ ಅಥವಾ ಪ್ರಾಣಿಗಳ ಗುಂಪನ್ನು ಎತ್ತಿ ತೋರಿಸುತ್ತದೆ, ಆದರೆ ಇತರ ವರ್ಷಗಳಲ್ಲಿ, ಇದು ವನ್ಯಜೀವಿಗಳ ಪ್ರಪಂಚದ ಮೇಲೆ ಪರಿಣಾಮ ಬೀರುವ ನಿರ್ದಿಷ್ಟ ಸಮಸ್ಯೆಯ ಮೇಲೆ ಕೇಂದ್ರೀಕರಿಸಿದೆ. ಹಿಂದಿನ ಥೀಮ್‌ಗಳು ವನ್ಯಜೀವಿ ಅಪರಾಧದ ಬಗ್ಗೆ ಗಂಭೀರವಾಗಿರುವುದು ಮತ್ತು ಯುವ ಧ್ವನಿಗಳನ್ನು ಆಲಿಸುವುದನ್ನು ಒಳಗೊಂಡಿವೆ. ವಿಶ್ವ ವನ್ಯಜೀವಿ ದಿನವನ್ನು CITES ಸೆಕ್ರೆಟರಿಯೇಟ್ ಜಾರಿಗೆ ತಂದಿದೆ, ಸಂಬಂಧಿತ UN ಸಂಸ್ಥೆಗಳೊಂದಿಗೆ ಒಟ್ಟಾಗಿ ಕೆಲಸ ಮಾಡುತ್ತದೆ. ಕೆಲವು ಇತರರಿಗೆ ಹೋಲಿಸಿದರೆ ದಿನವು ಹೆಚ್ಚು ಕಾಲ ಇರದಿರಬಹುದು, ಆದರೆ ಇದು ಈಗಾಗಲೇ ದೊಡ್ಡ ಪರಿಣಾಮವನ್ನು ಬೀರಿದೆ. ನೀವು ಭೂಮಿಯ ಬಗ್ಗೆ ಮತ್ತು ಅದರಲ್ಲಿರುವ ಎಲ್ಲದರ ಬಗ್ಗೆ ಭಾವೋದ್ರಿಕ್ತರಾಗಿದ್ದರೆ, ಆಚರಿಸುವುದು ಅತ್ಯಗತ್ಯ. ॐ

### ಸಂಪ್ರೀತಿ ಸುಘೋಷ



ಮನುಷ್ಯನಲ್ಲಿರುವ ರಾಗ ದ್ವೇಷಾದಿ
ಮಾಲಿನ್ಯವನ್ನು ತೊಡೆದು ಹಾಕುವಂಥ
ಸದ್ಗುರು ದೊರೆತಾಗ ಮನುಷ್ಯ
ಸನ್ಮಾರ್ಗದಲ್ಲಿ ಮುನ್ನಡೆದು
ಮುಕ್ತಿ ಪಡೆಯುವುದು ಸುಲಭ ಸಾಧ್ಯ.

ಡಾ. ನಿರ್ಮಲಾನಂದನಾಥ ಮಹಾಸ್ವಾಮೀಜಿ

# ನಮ್ಮೆಲ್ಲಾ ಕಷ್ಟಗಳನ್ನು ದೂರವಾಗಿಸುವ ಗುರುವಾರದ ಪರಿಹಾರಗಳಿವು..!

ಗುರುವಾರವನ್ನು ಬೃಹಸ್ಪತಿ, ಶ್ರೀ ಹರಿ ವಿಷ್ಣು ಮತ್ತು ಲಕ್ಷ್ಮೀದೇವಿಗೆ ಸಮರ್ಪಿಸಲಾಗಿದೆ. ಈ ದಿನ ಜನರು ಈ ದೇವತೆಗಳನ್ನು ಪೂರ್ಣ ಆಚರಣೆಗಳೊಂದಿಗೆ ಪೂಜಿಸುತ್ತಾರೆ. ಗುರು ಬಲಶಾಲಿಯಾಗಿದ್ದರೆ, ವ್ಯಕ್ತಿಯು ಜೀವನದಲ್ಲಿ ಸಾಕಷ್ಟು ಪ್ರಗತಿಯನ್ನು ಪಡೆಯುತ್ತಾನೆ. ಎಲ್ಲಾ ಕೆಲಸಗಳು ಯಶಸ್ವಿಯಾಗುತ್ತವೆ ಮತ್ತು ಆರ್ಥಿಕ ಸ್ಥಿತಿಯು ಬಲಗೊಳ್ಳುತ್ತದೆ. ಮತ್ತೊಂದೆಡೆ, ಗುರು ಬಲಹೀನನಾಗಿದ್ದರೆ, ವ್ಯಕ್ತಿಯು ಪ್ರತಿ ಕೆಲಸದಲ್ಲಿ ವೈಫಲ್ಯವನ್ನು ಪಡೆಯುತ್ತಾನೆ ಮತ್ತು ಹಣಕಾಸಿನ ನಿರ್ಬಂಧಗಳು ಸಹ ಉಳಿಯುತ್ತವೆ. ನಿಮ್ಮ ಕೆಲಸದಲ್ಲಿ ಅಡಚಣೆ ಉಂಟಾದರೆ ಮತ್ತು ಹಣಕ್ಕೆ ಸಂಬಂಧಿಸಿದ ಸಮಸ್ಯೆಗಳನ್ನು ಎದುರಿಸುತ್ತಿದ್ದರೆ, ಗುರುವಾರ ಕೆಲವು ವಿಶೇಷ ಕ್ರಮಗಳನ್ನು ತೆಗೆದುಕೊಳ್ಳುವುದರಿಂದ ನಿಮ್ಮ ಎಲ್ಲಾ ಸಮಸ್ಯೆಗಳು ದೂರವಾಗುತ್ತವೆ.

## ಈ ಮಂತ್ರವನ್ನು ಪಠಿಸಿ

ಗುರುವಾರ ಬೆಳಿಗ್ಗೆ ಸ್ನಾನ ಮಾಡಿದ ನಂತರ ಗುರು ದೇವನನ್ನು ಪೂಜಿಸಿ. ಇದರ ನಂತರ, ತುಳಸಿ ಮಾಲೆಯೊಂದಿಗೆ ಓಂ ಬೃಂ ಬೃಹಸ್ಪತೇ ನಮಃ ಎಂಬ ಮಂತ್ರವನ್ನು ಜಪಿಸಿ. ಇದು ನಿಮ್ಮ ಜೀವನದಲ್ಲಿ ಸಂತೋಷ ಮತ್ತು ಸಮೃದ್ಧಿಯನ್ನು ತರುತ್ತದೆ. ಇದರೊಂದಿಗೆ ನಿಮ್ಮ ಆರ್ಥಿಕ ಸ್ಥಿತಿಯೂ ಉತ್ತಮವಾಗಿರುತ್ತದೆ.

## ಲಕ್ಷ್ಮೀ ಪೂಜೆ

ಗುರುವಾರದ ಪೂಜೆಯನ್ನು ಯಾವಾಗಲೂ ಹಳದಿ ವಸ್ತ್ರಗಳನ್ನು ಧರಿಸಿ ಮಾಡಬೇಕು. ಇದರಿಂದ ವಿಷ್ಣುವು ನಿಮ್ಮ ಎಲ್ಲಾ ಇಷ್ಟಾರ್ಥಗಳನ್ನು ಪೂರೈಸುತ್ತಾನೆ. ಸಂಪತ್ತು ಮತ್ತು ಅದೃಷ್ಟದ ಅಧಿದೇವತೆಯಾದ ಲಕ್ಷ್ಮೀದೇವಿಯನ್ನು ಗುರುವಾರವೂ ಪೂಜಿಸಬೇಕು. ಇದು ಹಣ ಮತ್ತು ಹಣಕ್ಕೆ ಸಂಬಂಧಿಸಿದ ಸಮಸ್ಯೆಯನ್ನು ನಿವಾರಿಸುತ್ತದೆ.

## ಕ್ಷೌರ

ಗುರುವಾರ ಯಾವುದೇ ರೀತಿಯ ಕ್ಷೌರ ಕಾರ್ಯ ಮಾಡಬಾರದು. ಗುರುವಾರದಂದು ಹೀಗೆ ಮಾಡುವುದರಿಂದ ಆರ್ಥಿಕ ಮುಗ್ಗಟ್ಟಿನ ಪರಿಸ್ಥಿತಿ ನಿರ್ಮಾಣವಾಗುತ್ತದೆ ಎಂದು ನಂಬಲಾಗಿದೆ. ಇದರಿಂದ ನೀವು ಹಣದ ಸಮಸ್ಯೆಯನ್ನು ಎದುರಿಸಬೇಕಾಗುತ್ತದೆ.

## ಇದನ್ನು ಸೇವಿಸಬಾರದು

ಈ ದಿನ ವಿಷ್ಣುವಿಗೆ ಬಾಳೆಹಣ್ಣನ್ನು ಅರ್ಪಿಸಬೇಕು. ಇದಲ್ಲದೇ, ಹಳದಿ ಹೂವುಗಳು, ಬೇಳೆ ಮತ್ತು ಬೆಲ್ಲವನ್ನು ಅವರಿಗೆ ಅರ್ಪಿಸಿ. ದೇವರಿಗೆ ಅರ್ಪಿಸಿದ ಬಾಳೆಹಣ್ಣನ್ನು ನೀವೇ ಸ್ವತಃ ಸೇವಿಸಬಾರದು ಎಂಬುದನ್ನು ನೆನಪಿನಲ್ಲಿಡಿ. ಇದು ನಿಮ್ಮ ಸಂತೋಷ ಮತ್ತು ಸಮೃದ್ಧಿಯನ್ನು ಹೆಚ್ಚಿಸುತ್ತದೆ.

## ದಾಂಪತ್ಯ ಸಮಸ್ಯೆಗಳಿಗೆ ಪರಿಹಾರ


ಪತಿ–ಪತ್ನಿಯ ನಡುವೆ ಯಾವುದೇ ಸಮಸ್ಯೆ ಇದ್ದರೆ, ಇಬ್ಬರೂ ಗುರುವಾರ ಉಪವಾಸವನ್ನು ಆಚರಿಸಬೇಕು. ಇದು ನಿಮ್ಮಿಬ್ಬರ ಜೀವನದಲ್ಲಿ ಸಂತೋಷ ಮತ್ತು ಅದೃಷ್ಟವನ್ನು ಹೆಚ್ಚಿಸುತ್ತದೆ. ಹಾಗೂ ದಾಂಪತ್ಯ ಜೀವನದಲ್ಲಿನ ಸಮಸ್ಯೆಗಳನ್ನು ತೊಡೆದು ಹಾಕಲು ಸಹಕರಿಸುತ್ತದೆ.

## ದಾನ

ಗುರುವಾರದ ದಿನ ಮಾಡುವ ದಾನಗಳು ಅತ್ಯಂತ ಶುಭದಾಯಕ. ಗುರು ದೇವರ ಅನುಗ್ರಹಕ್ಕಾಗಿ ಈ ದಿನ ಯಥಾಶಕ್ತಿ ದಾನ ಮಾಡಿ. ಆಹಾರ ಪದಾರ್ಥಗಳು, ಹಳದಿ (ಬಾಳೆಹಣ್ಣು, ಮೂಸಂಬಿ, ಕಿತ್ತಳೆ...) ಹಣ್ಣುಗಳು, ಹಳದಿ (ಸೇವಂತಿಗೆ, ಗುಲಾಬಿ, ಸಂಪಿಗೆ..) ಹೂವುಗಳು, ಹಳದಿ ವಸ್ತ್ರಗಳು, ಧಾರ್ಮಿಕ ॐ

**ಪ್ರಕೃತಿ–ವಿಕೃತಿ–ಸಂಸ್ಕೃತಿ**
ಅಹಂಕಾರ ಪ್ರಕೃತಿ,
ದುರಹಂಕಾರ ವಿಕೃತಿ, ನಿರಹಂಕಾರ ಸಂಸ್ಕೃತಿ.

# ಎ. ಕೆ. ರಾಮಾನುಜನ್



ವಿಶ್ವಮಾನ್ಯ ಕವಿ, ಚಿಂತಕ, ಪ್ರಾಧ್ಯಾಪಕ, ಜನಪದ ತಜ್ಞ, ಶ್ರೇಷ್ಠ ಭಾಷಾ ತಜ್ಞ, ಭಾಷಾಂತರಕಾರ ಹೀಗೆ ವಿವಿಧ ಪ್ರತಿಭೆಗಳ ಮಹೋನ್ನತ ಸಂಗಮರಾದ ಅತ್ತಿಪಟ್ ಕೃಷ್ಣಸ್ವಾಮಿ ರಾಮಾನುಜನ್ ಅವರು ಮಾರ್ಚ್ 16, 1929ರಲ್ಲಿ ಮೈಸೂರಿನಲ್ಲಿ ಜನಿಸಿದರು. ರಾಮಾನುಜನ್ ಅವರು ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಮಹತ್ವದ ಕೊಡುಗೆಗಳನ್ನು ಕೊಡುವುದರ ಜೊತೆ-ಜೊತೆಗೆ ಕನ್ನಡದ ಕಸ್ತೂರಿಯನ್ನು ವಿಶ್ವದೆಲ್ಲೆಡೆ ಇಂಗ್ಲಿಷ್ ಭಾಷೆಯ ಮೂಲಕ ಪಸರಿಸುವ ಮನೋಜ್ಞ ಕಾರ್ಯ ಮಾಡಿದರು. ಈ ನಿಟ್ಟಿನಲ್ಲಿ ಅವರು ಇಂಗ್ಲಿಷಿನಲ್ಲಿ ಮೂಡಿಸಿದ ಬಸವಣ್ಣನವರ 'ಉಳ್ಳವರು ಶಿವಾಲಯವ ಮಾಡುವರು' ವಚನದ ಕನ್ನಡದ ಭಾಷಾಂತರ ಇಲ್ಲಿ ನೆನಪಾಗುತ್ತದೆ. ಈ ಭಾಷಾಂತರ ಅಸಾಧಾರಣವಾಗಿದೆ, ಶ್ರೇಷ್ಠವಾಗಿದೆ ಎಂಬುದು ವಿದ್ವಾಂಸರ ಅಭಿಪ್ರಾಯ.

## ವಿದ್ಯಾ ಸಾಧನೆ

ಮೈಸೂರು ವಿಶ್ವವಿದ್ಯಾನಿಲಯದಿಂದ ಬಿ.ಎ. ಮತ್ತು ಎಂ.ಎ. ಪದವಿಯನ್ನು ಗಳಿಸಿದ ರಾಮಾನುಜನ್ ಅವರು ದಕ್ಷಿಣ ಭಾರತದ ವಿವಿಧ ವಿಶ್ವವಿದ್ಯಾಲಯಗಳಲ್ಲಿ ಅಧ್ಯಾಪಕರಾಗಿ ಕೆಲಸ ಮಾಡಿ, 1958ರ ವರ್ಷದಲ್ಲಿ ಪುಣೆಯ ಡೆಕ್ಕನ್ ವಿಶ್ವವಿದ್ಯಾಲಯದಿಂದ 'ಥಿಯೇಟ್ರಿಕಲ್ ಲಿಂಗ್ವಿಸ್ಟಿಕ್ಸ್' ವಿಷಯದಲ್ಲಿ ಉನ್ನತ ಡಿಪ್ಲೋಮಾ ಪದವಿ ಪಡೆದರು. ಮುಂದಿನ ವರ್ಷದಲ್ಲಿ ಅಮೆರಿಕಕ್ಕೆ ತೆರಳಿದ ರಾಮಾನುಜನ್ 1963ರ ವರ್ಷದಲ್ಲಿ ಅಮೆರಿಕ ಇಂಡಿಯಾನ ವಿಶ್ವವಿದ್ಯಾನಿಲಯದಿಂದ ಭಾಷಾ ವಿಜ್ಞಾನದ ಪಿ.ಎಚ್.ಡಿ ಗೌರವವನ್ನು ಗಳಿಸಿದರು.

1962ರಲ್ಲಿ ಚಿಕಾಗೋ ವಿಶ್ವವಿದ್ಯಾಲಯದಲ್ಲಿ ಭಾಷಾ ವಿಜ್ಞಾನ ಹಾಗೂ ದ್ರಾವಿಡ ಅಧ್ಯಯನದ ಅಧ್ಯಾಪಕರಾಗಿ ಸೇರಿದ ರಾಮಾನುಜನ್ 1993ರಲ್ಲಿ ನಿಧನರಾಗುವತನಕದ ತಮ್ಮ ಬಹುತೇಕ ವೃತ್ತಿ ಜೀವನವನ್ನು ಅಲ್ಲಿಯೇ ನಡೆಸಿದರು. ಜೊತೆಗೆ ವಿಸ್ಕಾಸಿನ್, ಬರ್ಕಲಿ, ಮಿಚಿಗನ್ ಮುಂತಾದ ವಿಶ್ವವಿದ್ಯಾಲಯಗಳಲ್ಲಿ ಸಂದರ್ಶಕ ಪ್ರಾಧ್ಯಾಪಕರಾಗಿದ್ದರು. ಚಿಕಾಗೋ ವಿಶ್ವವಿದ್ಯಾಲಯದಲ್ಲಿ ದಕ್ಷಿಣ ಏಷ್ಯಾ ಭಾಷೆಗಳ ಅಧ್ಯಯನ ಪೀಠ ಸ್ಥಾಪನೆ ಮಾಡಿದ ಕೀರ್ತಿ ಎ. ಕೆ. ರಾಮಾನುಜನ್ ಅವರಿಗೆ ಸಲ್ಲುತ್ತದೆ..

## ಸಾಹಿತ್ಯ ಸೃಷ್ಟಿ

ಪ್ರಸಿದ್ಧ ನವ್ಯ ಕವಿ ಗೋಪಾಲಕೃಷ್ಣ ಅಡಿಗರ ಪ್ರಭಾವದಿಂದ ಹೊರಬಂದು ಹೊಸ ಸಂವೇದನೆಗಳೊಂದಿಗೆ ತಮ್ಮದೇ ಆದ ರೀತಿಯಲ್ಲಿ ಕಾವ್ಯ ರಚಿಸಿದ ರಾಮಾನುಜನ್ ಅವರು ಮೂರು ಕವನ ಸಂಕಲನಗಳನ್ನು ಪ್ರಕಟಿಸಿದ್ದಾರೆ. 'ಹೊಕ್ಕುಳಲ್ಲಿ ಹೂವಿಲ್ಲ' (1969) ಇವರ ಪ್ರಥಮ ಸಂಕಲನ. ಪದ್ಯ ರಚನೆ, ಭಾಷಾ ಬಳಕೆ, ಪ್ರತಿಮೆಗಳ ಬಳಕೆ– ಈ ದೃಷ್ಟಿಯಿಂದ ಇವರ ನವ್ಯ ಕವನಗಳಿಗೆ ನವ್ಯ ಸಾಹಿತ್ಯದಲ್ಲಿ ಪ್ರತ್ಯೇಕ ಸ್ಥಾನ ಸಲ್ಲುತ್ತದೆ. 'ಹೊಕ್ಕುಳಲ್ಲಿ ಹೂವಿಲ್ಲ ಮತ್ತು ಇತರ ಕವಿತೆಗಳು' ಅಲ್ಲದೆ 'ಕುಂಟೋ ಬಿಲ್ಲೆ', 'ಮತ್ತೊಬ್ಬನ ಆತ್ಮಚರಿತ್ರೆ' ಎ. ಕೆ. ರಾಮಾನುಜನ್ ಅವರ ಪ್ರಸಿದ್ಧ ಕೃತಿಗಳು. ರಾಮಾನುಜನ್ ಅವರ ಕೃತಿಗಳ ಸಮಗ್ರ ಸಂಪುಟವನ್ನು ಮನೋಹರ ಗ್ರಂಥಮಾಲೆ ಹೊರತಂದಿದ್ದು ಅವರ ಮೂರು ಕವನ ಸಂಕಲನಗಳು, ಒಂದು ಕಾದಂಬರಿ, ನಾಲ್ಕು ಸಣ್ಣ ಕತೆಗಳು, ಎರಡು

ರೇಡಿಯೋ ನಾಟಕಗಳು, ಗಾದೆಗಳನ್ನು ಕುರಿತ ಕಿರು ಹೊತ್ತಿಗೆಗಳು ಇಲ್ಲಿ ಕೂಡಿವೆ. 'ನಡೆದು ಬಂದ ದಾರಿ' ಗ್ರಂಥದಲ್ಲೂ, 'ಸಾಕ್ಷಿ' ಪತ್ರಿಕೆಯಲ್ಲೂ ಪ್ರಕಟವಾಗಿರುವ ಕವನಗಳೂ, ಐವತ್ತರ ದಶಕದಲ್ಲಿ ರಾಶಿ ಅವರ 'ಕೊರವಂಜಿ'ಯಲ್ಲಿ ಪ್ರಕಟವಾದ ಹಲವು ನಗೆ ಬರಹಗಳೂ ಇಲ್ಲಿ ಸೇರಿವೆ.

### ಶ್ರೇಷ್ಠ ಭಾಷಾಂತರಗಳು

ರಾಮಾನುಜನ್ ಕೇವಲ ಕವಿಗಳಾಗಿರದೆ ಉತ್ತಮ ಭಾಷಾಂತರಕಾರರೂ ಹೌದು. ಕನ್ನಡ ವಚನ ಸಾಹಿತ್ಯವನ್ನು ಪಾಶ್ಚಾತ್ಯ ಜಗತ್ತಿಗೆ ಪರಿಚಯಿಸಿ ಕೊಡುವ ಒಂದು ವಿಶಿಷ್ಟ ಪ್ರಯತ್ನ 'ಸ್ಪೀಕಿಂಗ್ ಆಫ್ ಶಿವ, (1973). 'ದಿ ಇಂಟೀರಿಯರ್ ಲ್ಯಾಂಡ್ ಸ್ಕೇಪ್' (1970) ಎಂಬ ಪುಸ್ತಕದಲ್ಲಿ ಪ್ರಾಚೀನ ತಮಿಳು ಸಾಹಿತ್ಯದಿಂದ ಆರಿಸಿದ ಭಾಗಗಳನ್ನು ಅನುವಾದಿಸಲಾಗಿದೆ. ಎಂ.ಜಿ.ಕೃಷ್ಣಮೂರ್ತಿಯವರೊಡನೆ ಗೋಪಾಲಕೃಷ್ಣ ಅಡಿಗರ ಕೆಲವು ಕವನಗಳನ್ನು ಇಂಗ್ಲಿಷಿಗೆ ಭಾಷಾಂತರಿಸಿದ್ದಾರೆ. ಇದರ ಹೆಸರು 'ಸಾಂಗ್ ಆಫ್ ಅರ್ಥ್ ಅಂಡ್ ಅದರ್ ಪೊಯಂ' (1968). ಯು.ಆರ್. ಅನಂತಮೂರ್ತಿಯವರ ಸುಪ್ರಸಿದ್ಧ ಕಾದಂಬರಿ 'ಸಂಸ್ಕಾರ'ವನ್ನು ಅವರು ಇಂಗ್ಲಿಷಿಗೆ ಭಾಷಾಂತರಿಸಿದ್ದಾರೆ. ರಾಮಾನುಜನ್ ಅವರು ಇಂಗ್ಲಿಷಿನಿಂದಲೂ ಕನ್ನಡಕ್ಕೆ ಕೆಲವು ಕೃತಿಗಳನ್ನು ಭಾಷಾಂತರಿಸಿದ್ದಾರೆ. 'ಹಳದಿಮೀನು' (ಮೂಲ:ಶೌರಿ) ಎಂಬ ಕಾದಂಬರಿ ಅವುಗಳಲ್ಲಿ ಒಂದು. ಕನ್ನಡ ಜನಪದ ಸಾಹಿತ್ಯದ ಒಂದು ಮುಖ್ಯ ಪ್ರಕಾರವಾದ ಗಾದೆಗಳನ್ನು ಕುರಿತಂತೆ 1955 ರಷ್ಟು ಹಿಂದೆಯೇ 'ಗಾದೆಗಳು' ಎಂಬ ಕಿರು ಗ್ರಂಥವನ್ನು ಇವರು ಪ್ರಕಟಿಸಿದರು. ಇಲ್ಲಿ ಗಾದೆಯ ರೂಪರಚನೆಗಳ ಜೊತೆಗೆ ಕೆಲವು ಕನ್ನಡ ಗಾದೆಗಳ ವಿಶ್ಲೇಷಣೆಯೂ ಸೇರಿದೆ. ಕರ್ನಾಟಕದಲ್ಲಿ ಜಾನಪದದ ಬಗ್ಗೆ ಇನ್ನೂ ಅಷ್ಟಾಗಿ ವೈಜ್ಞಾನಿಕ ಪ್ರಜ್ಞೆ ಮೂಡದೆ ಇದ್ದಂಥ ಸಂದರ್ಭದಲ್ಲಿ ಈ ಕೃತಿ ಪ್ರಕಟವಾದದ್ದು ಮಹತ್ವದ ಸಂಗತಿ. ಕನ್ನಡ ಸಾಹಿತ್ಯದ ಬಗ್ಗೆ ಅದರಲ್ಲಿಯೂ ಸಮಕಾಲೀನ ಸಾಹಿತ್ಯದ ಬಗ್ಗೆ ಅಪಾರ ಕಾಳಜಿ, ಶ್ರದ್ದೆ ಹೊಂದಿರುವ ರಾಮಾನುಜನ್ ಅವರು ಕನ್ನಡ ಭಾಷೆ, ಸಾಹಿತ್ಯ ಹಾಗೂ ಸಂಸ್ಕೃತಿಗಳನ್ನು ಪಾಶ್ಚಾತ್ಯರಿಗೆ ಪರಿಚಯ ಮಾಡಿಕೊಡುವ ಕಾರ್ಯದಲ್ಲಿ ತೊಡಗಿದ್ದರು. ಈ ಕುರಿತು ಅವರು ಅಮೆರಿಕ ಮೊದಲಾದೆಡೆಗಳಲ್ಲಿ ಉಪನ್ಯಾಸಗಳನ್ನೂ ನೀಡಿದ್ದಾರೆ. ಅನೇಕ ಲೇಖನಗಳನ್ನು ಬರೆದಿದ್ದಾರೆ. 'ಡಿಕ್ಷನರಿ ಆಫ್ ಓರಿಯಂಟಲ್ ಲಿಟರೇಚರ್ – ಸೌತ್ ಅಂಡ್ ಸೌತ್ ಈಸ್ಟ್ ಏಷ್ಯಾ' (1975) ಎಂಬ ಗ್ರಂಥದಲ್ಲಿ ಕನ್ನಡದ ಪ್ರಸಿದ್ಧ ಲೇಖಕರನ್ನು ಕುರಿತಂತೆ ಇವರು ಬರೆದ ಲೇಖನಗಳಿವೆ.

### ಇಂಗ್ಲಿಷ್ ಭಾಷೆಯಲ್ಲಿ

ಇಂಗ್ಲಿಷ್ ಭಾಷೆಯಲ್ಲಿ ಬರೆಯುತ್ತಿದ್ದ ಪ್ರಮುಖ ಭಾರತೀಯ ಲೇಖಕರಲ್ಲಿ ರಾಮಾನುಜನ್ ಅವರೂ ಒಬ್ಬರು. 1966 ರಲ್ಲಿ ರಾಮಾನುಜನ್ ಅವರ 'ದಿ ಸ್ಟ್ರೈಡರ್ಸ್' ಮತ್ತು, 1971ರಲ್ಲಿ 'ರಿಲೇಶನ್ಸ್' ಎಂಬ ಕವನ ಸಂಕಲನಗಳು ಪ್ರಕಟವಾದವು. ಕನ್ನಡ, ಇಂಗ್ಲಿಷ್, ತಮಿಳು, ಮಲಯಾಳಂ, ಭಾಷೆಗಳನ್ನು ಆಳವಾಗಿ ಅಧ್ಯಯನ ಮಾಡಿರುವ ರಾಮಾನುಜನ್ ಅವರು ಭಾಷಾವಿಜ್ಞಾನ, ಜಾನಪದ, ಭಾರತೀಯ ಸಾಹಿತ್ಯ ಈ ಮೊದಲಾದ ವಿಷಯಗಳನ್ನು ಕುರಿತು ಬರೆದ ಲೇಖನಗಳು ಭಾರತ, ಅಮೆರಿಕ, ಗ್ರೇಟ್‌ಬ್ರಿಟನ್, ಮೊದಲಾದ ದೇಶಗಳ ಪ್ರತಿಷ್ಠಿತ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಎ. ಕೆ. ರಾಮಾನುಜನ್ ಅವರು ಇಂಗ್ಲಿಷಿನಲ್ಲಿ ಪ್ರಕಟಿಸಿರುವ ಪ್ರಮುಖ ಕೃತಿಗಳಲ್ಲಿ ಕೆಲವೊಂದನ್ನು ಹೆಸರಿಸುವುದಾದರೆ ಮುಂತಾದ ಮಹತ್ವಪೂರ್ಣ ಕೃತಿಗಳು ಎ.ಕೆ. ರಾಮಾನುಜನ್ ಅವರ ಸಾಮರ್ಥ್ಯ, ಪ್ರತಿಭೆ ಪಾಂಡಿತ್ಯಗಳನ್ನು ಅಜರಾಮರಗೊಳಿಸಿವೆ.


### ಪ್ರಶಸ್ತಿ ಗೌರವಗಳು

ರಾಮಾನುಜನ್‌ರ ಇಂತಹ ಬಹುಮುಖ ಸೇವೆಯನ್ನು ಗಮನಿಸಿದ ಭಾರತ ಸರ್ಕಾರ 1976 ರಲ್ಲಿ ಇವರಿಗೆ ಪದ್ಮಶ್ರೀ ಪ್ರಶಸ್ತಿಯನ್ನು ನೀಡಿ ಗೌರವಿಸಿತು. 1983ರಲ್ಲಿ ಅವರಿಗೆ ಪ್ರಸಿದ್ಧ ಮ್ಯಾಕ್ ಆರ್ಥರ್ ಫೆಲ್ಲೋಶಿಪ್ ಗೌರವ ಅರ್ಪಿತವಾಯಿತು. ಡಾ. ರಾಮಾನುಜನ್ ಅವರು ಜುಲೈ 13, 1993 ರಂದು ನಿಧನರಾದರು. ॐ

**ಸಮೃದ್ಧಿ ಸುಜ್ಞಾನ**

ಮೌನವು ಒಂದು ಸುಂದರವಾದ ಭಾಷೆ ನಮ್ಮಲ್ಲಿ ಎಷ್ಟು ಬುದ್ಧಿವಂತಿಕೆ
ಮಾತುಗಳು ಇದ್ದರೂ ಕೂಡ...
ಕೆಲವೊಂದು ಸಮಸ್ಯೆಗಳಿಗೆ ಪರಿಹಾರ ಅಂದ್ರೆ ಮೌನ ಮಾತ್ರ..

# ಹಾಸ್ಯ ಮತ್ತು ಆರೋಗ್ಯ



✍ ಡಾ. ಪ್ರಭುದೇವ. ಎಂ.ಸಿ,
ಸಮುದಾಯ ವೈದ್ಯ ಶಾಸ್ತ್ರ ವಿಭಾಗ

### ಹಾಸ್ಯವು ಮಾನಸಿಕ ಆರೋಗ್ಯದ ಮೇಲೆ ಹೇಗೆ ಪರಿಣಾಮ ಬೀರುತ್ತದೆ?

ಕಳೆದ 50 ವರ್ಷಗಳಿಗೆ ಹೋಲಿಸಿದರೆ ನಗರ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ನಗುವುದು ಗಣನೀಯವಾಗಿ ಕಡಿಮೆಯಾಗುತ್ತಿದೆ. ಇದಕ್ಕೆಲ್ಲ ಕಾರಣ ನಮ್ಮ ಸಂಬಂಧಗಳಲ್ಲಿ ಆಗುತ್ತಿರುವ ಬದಲಾವಣೆಗಳು ಮತ್ತು ಜೀವನ ಶೈಲಿಯಲ್ಲಿ ಆಗುತ್ತಿರುವ ಏರುಪೇರುಗಳು. ಮಾನಸಿಕ ಒತ್ತಡ, ಅವಿಭಕ್ತ ಸಂಬಂಧಗಳು– ಮರೆಯಾಗುತ್ತಿರುವ ವಿಭಕ್ತ ಕುಟುಂಬಗಳು, ಪ್ರೀತಿ ನಂಬಿಕೆಗಳ ಅಭಾವ, ಸಮಯದ ಅಭಾವ, ಆಹಾರ ಕ್ರಮಗಳಲ್ಲಿನ ಬದಲಾವಣೆಗಳು, ಯಾಂತ್ರಿಕ ಬದುಕು, ನಿರುದ್ಯೋಗ, ಅನಾರೋಗ್ಯ, ಆಧ್ಯಾತ್ಮಿಕವಾಗಿ ಕಡಿಮೆಯಾಗುತ್ತಿರುವ

**ನಂಬಿಕೆಗಳು ಹಾಗೂ ಮತ್ತಿತರ ಸಾಮಾಜಿ ಹಾಗು ಆರ್ಥಿಕ ಸಮಸ್ಯೆಗಳು.**

ಯಾರೇ ಹೇಳಿದ ಮಾತಿಗೆ ಮುಸಿಮುಸಿ ನಗುವುದಾಗಲೀ ಅಥವಾ ಕಾಮಿಡಿ ಶೈಲಿಯಲ್ಲಿ ಜೋರಾಗಿ ನಗುವುದಾಗಲೀ, ಒಟ್ಟಿನಲ್ಲಿ ಒಳ್ಳೆಯ ನಗು ಆರೋಗ್ಯಕರ. ಹಲವಾರು ವೈದ್ಯಕೀಯ ಅಧ್ಯಯನಗಳು ನಗು ನೈಸರ್ಗಿಕವಾಗಿದ್ದು ಮಾನಸಿಕ ಆರೋಗ್ಯಕ್ಕೆ ಔಷಧಿ ಎಂದು ಒಪ್ಪಿಕೊಳ್ಳುತ್ತವೆ.

### ಹಾಸ್ಯ ಮತ್ತು ಮಾನಸಿಕ ಆರೋಗ್ಯ

ಉತ್ತಮ ಹಾಸ್ಯ ಪ್ರಜ್ಞೆಯು ಹಲವಾರು ದೀರ್ಘಕಾಲೀನ ಮತ್ತು ಅಲ್ಪಾವಧಿಯ ಮಾನಸಿಕ ಆರೋಗ್ಯ ಪ್ರಯೋಜನಗಳನ್ನು ಹೊಂದಿದೆ.

### ಹಾಸ್ಯದ ಅಲ್ಪಾವಧಿಯ ಮಾನಸಿಕ ಆರೋಗ್ಯ ಪ್ರಯೋಜನಗಳು

ನಗುವುದು ನಿಮ್ಮ ಮನಸ್ಸನ್ನು ವಿಶ್ರಾಂತಿ ಮಾಡಲು ಸಹಾಯ ಮಾಡುವ ಧನಾತ್ಮಕ ದೈಹಿಕ ಮತ್ತು ಮಾನಸಿಕ ಬದಲಾವಣೆಗಳನ್ನು ಸ್ವಯಂಚಾಲಿತವಾಗಿ ಪ್ರಚೋದಿಸುತ್ತದೆ.

ಅಂಗ ಪ್ರಚೋದನೆ : ಒಳ್ಳೆಯ ನಗು ನಿಮ್ಮ ಆಮ್ಲಜನಕ–ಸಮೃದ್ಧ ಗಾಳಿಯ ಸೇವನೆಯನ್ನು ಸುಧಾರಿಸುತ್ತದೆ. ಇದು ಪ್ರತಿಯಾಗಿ, ಹೃದಯ, ಶ್ವಾಸಕೋಶಗಳು ಮತ್ತು ಸ್ನಾಯುಗಳಂತಹ ಅಂಗಗಳನ್ನು ಉತ್ತೇಜಿಸುತ್ತದೆ. ನಿಮ್ಮ ಮೆದುಳು ಎಂಡಾರ್ಫಿನ್‌ಗಳನ್ನು ಸಹ ಬಿಡುಗಡೆ ಮಾಡುತ್ತದೆ – ಸಂತೋಷದ ಭಾವನೆ ಮತ್ತು ಶಾಂತ ಮನಸ್ಸನ್ನು ಉಂಟುಮಾಡುವ ಹಾರ್ಮೋನುಗಳಿವೆ.

ಒತ್ತಡ ಪರಿಹಾರ : ನಗುವುದು ನಿಮ್ಮ ದೇಹದ ಒತ್ತಡದ ಪ್ರತಿಕ್ರಿಯೆಯ ಕಾರ್ಯವಿಧಾನವನ್ನು ಸಕ್ರಿಯಗೊಳಿಸುತ್ತದೆ. ಈ ಪ್ರಕ್ರಿಯೆಯು ನಿಮ್ಮ ಹೃದಯ ಬಡಿತವನ್ನು ಬದಲಾಯಿಸುತ್ತದೆ ಮತ್ತು ನಿಮ್ಮನ್ನು ಹೆಚ್ಚಿನ ಉತ್ಸಾಹದಲ್ಲಿರಿಸುತ್ತದೆ.

ಉದ್ವೇಗದಿಂದ ಉಪಶಮನ : ನಗು ಕ್ಷಿಪ್ರ ರಕ್ತ ಪರಿಚಲನೆಯನ್ನು ಉತ್ತೇಜಿಸುತ್ತದೆ. ಇದು ಸಂಭವಿಸಿದಾಗ, ನೀವು ಶಾಂತಗೊಳಿಸುವ ಸಂವೇದನೆಯನ್ನು ಅನುಭವಿಸಬಹುದು ಅದು ಒತ್ತಡತನ್ನು ತೆಗೆದುಹಾಕುತ್ತದೆ.

## ಮಾನಸಿಕ ಆರೋಗ್ಯದ ಮೇಲೆ ಹಾಸ್ಯದ ದೀರ್ಘಾವಧಿಯ ಪ್ರಯೋಜನಗಳು.

ಅಲ್ಪಾವಧಿಯ ಪ್ರಯೋಜನಗಳ ಜೊತೆಗೆ, ಹಾಸ್ಯವು ಹಲವಾರು ವೈಜ್ಞಾನಿಕತಾಗಿ ಸಾಬೀತಾಗಿರುವ ದೀರ್ಘಕಾಲೀನ ಪರಿಣಾಮಗಳನ್ನು ಹೊಂದಿದೆ. ಅವುಗಳಲ್ಲಿ ಕೆಲವು ಸೇರಿವೆ:

ನೋವು ನಿವಾರಕ: ಒಳ್ಳೆಯ ನಗುವಿನಿಂದಾಗಿ ನಿಮ್ಮ ದೇಹವು ನೈಸರ್ಗಿಕ ನೋವು ನಿವಾರಕಗಳನ್ನು ಬಿಡುಗಡೆ ಮಾಡುತ್ತದೆ, ಇದರಿಂದಾಗಿ ದೈಹಿಕ ನೋವಿನಿಂದ ನಿವಾರಣೆ ಸಿಗುತ್ತದೆ.

ಸಕಾರಾತ್ಮಕತೆ: ಉತ್ತಮ ಹಾಸ್ಯ ಪ್ರಜ್ಞೆಯು ಇತರ ಜನರೊಂದಿಗೆ ಸಂವಹನ ನಡೆಸಲು ಮತ್ತು ಸಂಪರ್ಕಿಸಲು ನಿಮಗೆ ಸಹಾಯ ಮಾಡುತ್ತದೆ. ಸಕಾರಾತ್ಮಕ ಆಲೋಚನೆಗಳು ಮತ್ತು ಉತ್ತಮ ಸಂಬಂಧಗಳು ನಿಮ್ಮ ಮನಸ್ಸನ್ನು ಕಷ್ಟಕರ ಸಂದರ್ಭಗಳಲ್ಲಿ ತೆಗೆದುಕೊಳ್ಳುವ ಮೂಲಕ ನಿಭಾಯಿಸಲು ನಿಮಗೆ ಸಹಾಯ ಮಾಡಬಹುದು.

## ನಿಮ್ಮ ಹಾಸ್ಯಪ್ರಜ್ಞೆಯನ್ನು ಸುಧಾರಿಸಲು ಸಲಹೆಗಳು

ನೀವು ನೈಸರ್ಗಿಕವಾಗಿ ಹರ್ಷಚಿತ್ತದಿಂದ ಇರುವ ವ್ಯಕ್ತಿಯಾಗಿದ್ದರೆ, ನೀವು ಖಿನ್ನತೆ ಮತ್ತು ಆತಂಕಕ್ಕೆ ಒಳಗಾಗುವ ಸಾಧ್ಯತೆ ಕಡಿಮೆ. ಆದಾಗ್ಯೂ ಸಂತೋಷದ ಜನರು ಮಾನಸಿಕ ಆರೋಗ್ಯ ಸಮಸ್ಯೆಗಳಿಗೆ ಗುರಿಯಾಗುವುದಿಲ್ಲ ಎಂದು ಇದರ ಅರ್ಥವಲ್ಲ. ಜೀವನವು ಕೆಲವೊಮ್ಮೆ ಅಗಾಧವಾಗಿರಬಹುದು. ಪ್ರಬಲ ಜನರು ಸಹ ಮುರಿಯುತ್ತಾರೆ. ಹಾಸ್ಯದ ಉತ್ತಮ ಪ್ರಜ್ಞೆಯು ನಿಮ್ಮ ಒತ್ತಡದ ಮಟ್ಟವನ್ನು ನಿಯಂತ್ರಣದಲ್ಲಿಡಲು ನೈಸರ್ಗಿಕ ಮಾರ್ಗವಾಗಿದೆ. ಕೆಳಗಿನ ಸಲಹೆಗಳು ಅದನ್ನು ಅಭಿವೃದ್ಧಿಪಡಿಸಲು ನಿಮಗೆ ಸಹಾಯ ಮಾಡುತ್ತದೆ:

ನಿಮಗೆ ಸಂತೋಷವನ್ನು ನೀಡುವ ವಿಷಯಗಳ ಮೇಲೆ ನಿಮ್ಮ ಗಮನವನ್ನು ಕೇಂದ್ರೀಕರಿಸಿ: ಹಾಸ್ಯವು ಸಂತೋಷದ ಸುತ್ತ ಸುತ್ತುತ್ತದೆ. ನಿಮ್ಮನ್ನು ನಗಿಸುವ ಕೆಲಸಗಳನ್ನು ಮಾಡುವ ಮೂಲಕ ಸಂತೋಷವಾಗಿರಲು ಪ್ರಯತ್ನಿಸಿ. ಒಳ್ಳೆಯ ಆಲೋಚನೆಗಳನ್ನು ತರುವ ಮತ್ತು ಅಚ್ಚುಮೆಚ್ಚಿನ ನೆನಪುಗಳನ್ನು ಪ್ರನರುಜ್ಜೀವನಗೊಳಿಸುವ ಸರಳವಾದ ವಿಷಯಗಳನ್ನು ಗುರುತಿಸುವ ಮೂಲಕ ಹಾಗೆ ಮಾಡಲು ಉತ್ತಮ ಮಾರ್ಗವಾಗಿದೆ .

**ಕೇವಲ ನಗುವುದರಿಂದ ಇಷ್ಟೆಲ್ಲ ಪ್ರಯೋಜನಗಳಿರುವುದರಿಂದ ಸದಾ ನಗುತ್ತಿರಿ, ನಗಿಸುತ್ತಿರಿ.**

********************


## DECLARATION

Statement about ownership of
**'SAMPREETHI SAMRUDDHI'** (Kannada)
Under Rule 8 Form (IV) News Paper, Central Rules 1956

| | | |
|---|---|---|
| 1. Place of Publication | : | # 83, Basavanna, Temple Road, Doddasomanahalli Magadi Tq. Ramanagara Dist - 562131 |
| 2. Periodicity or Publication | : | Monthly |
| 3. Printer Name | : | Arvind |
| Nationality | : | Indian |
| Address | : | Computer World, Near G.T. Mall, Mallige Thota, Magadi Road, Bengaluru - 560 023. |
| 4. Publisher Name | : | D.C. Ramachandra |
| Nationality | : | Indian |
| Address | : | #83, Basavanna Temple Road, Doddasomanahalli, Magadi Tq. Ramanagara Dist - 562131 |
| 5. Editor's Name | : | Dr. C. Nanjundaiah |
| Nationality | : | Indian |
